ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮವಂಗೂಳಿಸುವ ಸೂತ. ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಡಳಿತ, ಕಾನೂನು ಮತ್ತು ಸಂಸದೀಯ ಸಚಿವರು).—

''೧೯೪೫ನೇ ಇಸವಿಯ ತಿದ್ದುಪಡಿಯಾದಂತಹ ರಾಜ್ಯದ ಬಳಕೆ ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

''೧೯೪೫ನೇ ಇಸವಿಯ ತಿದ್ದುಪಡಿಯಾದಂತಹ ರಾಜ್ಯದ ಬಳಕೆ ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಗೆ ನೀಡಲಾಯಿತು.

೧೯೪೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸಬು ಹಾಗೂ ಉದ್ಯೋಗಗಳ ಮೇಲಿನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು).—೧೯೪೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸುಬು ಹಾಗೂ ಉದ್ಯೋಗಗಳ ಮೇಲಿನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ವಂಡಿಸಲಾಯಿತು

† ಶ್ರೀ ಎಂ.ಎಸ್ ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ ವೃತ್ತಿ ತೆರಿಗೆಯ ಬಗ್ಗೆ ಇಲ್ಲಿ ಮಂಡಿಸಿರತಕ್ಕಂತಹ ಮಸೂದೆಯ ಪ್ರಕಾರ ಕನಿಷ್ಟ ಸಂಬಳ ೧೨೦೦ ಕಡಿಮೆ ಇದ್ದರೆ, ಅಂತಹವರಿಗೆ ಇವತ್ತಿನ ದಿವಸ ಅವರ ಮೂಲ ಸಂಬಳದ ಆಧಾರದ ಮೇಲೆ ವಿನಾಯಿತಿಯನ್ನು ಕೊಡಬೇಕು ಎಂಬ ಅಂಶ ಇದರಲ್ಲಿ ಅಡಕವಾಗಿದೆ. ಆ ಒಂದು ವಿಷಯವನ್ನು ನಾನಂ ಸ್ವಾಗತಿಸುತ್ತೇನೆ. ಏಕೆಂದರೆ ಅದು ಮೊದಲು ಇದ್ದ ರೀತಿಯಲ್ಲಿ ಸಂಬಳ ಅಂದರೆ ಒಟ್ಟು ಗ್ರಾಸ್ ಸ್ಯಾಲರಿ ಅಂತ ಹೇಳುತ್ತಿದ್ದರು. ಒಟ್ಟು ಸಂಬಳವನ್ನು ತೆಗೆಪುಕೊಂಡಾಗ ಖಂಡಿತವಾಗಿಯೂ ಅನೇಕರಿಗೆ ಬಹಳ ತೊಂದರೆಯಾಗುತ್ತಿತ್ತು. ಈಗ ತಂದಿರುವ ತಿದ್ದುಪಡಿಯ ರೀತಿಯಲ್ಲ್ಲೇ ಕಳೆದ ಸಾರಿ ಒಂದು ತಿದ್ದುಪಡಿಯನ್ನು ತಂದರು. ಆ ತಿದ್ದುಪಡಿಯ ವಿರುದ್ಧವಾಗಿ ನೋಟಿಫಿಕೇಷನ್ ಹೊರಡಿಸಿದರು. ಅದರ ಆಧಾರದ ಮೇಲೆ ಈ ಒಂದು ವೃತ್ತಿ ತೆರಿಗೆಯನ್ನು ವಸೂಲಿ ಮಾಡಿದ್ದರು. ಬಹಳ ಜನ ಕಾರ್ಮಿಕರು ಇದ್ದಾರೆ. ಮಧ್ಯಮ ವರ್ಗದ ನೌಕರರೂ ಇದ್ದಾರೆ. ಅಂತಹವರಿಗೆಲ್ಲಾ ಅದರಿಂದ ತುಂಬಾ ತೊಂದರೆಯಾಯಿತು. ಪ್ರತಿ ತಿಂಗಳಿಗೆ ೨೦ ರೂ.ಗಳಿಂದ ೨೫ ರೂ.ಗಳವರೆಗೆ ಸರ್ಕಾರಿ ನೌಕರರಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಹೀಗೆಲ್ಲಾ ಅವರ ಸಂಬಳದಲ್ಲಿ ಕಟ್ ಮಾಡಿದರು. ಈಗ ಈ ಒಂದು ತಿದುಪಡಿಯಿಂದ ಅದು ಹೋಗಿ ಒಂದು ವಿಭಾಗದ ಜನರಿಗೆ ಸ್ವಲ್ಪ ಮಟ್ಟಿನ ರಿಯಾಯಿತಿ

† ಈ ಚಿನ್ಹೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಿಕ್ಕುತ್ತದೆ ಎನ್ನುವಂತಹದ್ದು ನಿಜ. ಮೂಲಭೂತವಾಗಿ ಈ ತರಹ ವೃತ್ತಿ ತೆರಿಗೆ ಇರಬೇಕೇ ಎನ್ನುತಕ್ಕಂತಹದ್ದು ಈಗ ಇರುವ ಪ್ರಶ್ನೆ. ನನ್ನ ಅಭಿಪ್ರಾಯದಲ್ಲಿ ವೃತ್ತಿ ತೆರಿಗೆ ಇರಲೇಕೂಡದು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಏಕೆಂದರೆ ಈ ವೃತ್ತಿ ತೆರಿಗೆ ಎನ್ನುವುದನ್ನು ನೋಡಿದರೆ ಇದು ಸೈದ್ಧಾಂತಿವಾಗಿ ಹಾಗೂ ವೈಜ್ಞಾನಿಕವಾಗಿ ಸರಿಯಾದುದಲ್ಲ ಅಂತ ಹೇಳಿದರೆ ತಪ್ಪಾಗುವುದಿಲ್ಲ. ಪುರಸಭೆಗಳಲ್ಲಿ ಹಾಗೂ ನಗರಸಭೆಗಳಲ್ಲಿ ಈಗಾಗಲೇ ವೃತ್ತಿ ತೆರಿಗೆಗಳನ್ನು ಹಾಕುತ್ತಿದ್ದಾರೆ. ಅವುಗಳಿಗೆ ಅಧಿಕಾರವನ್ನೂ ಕೂಡ ಕೊಡಲಾಗಿದೆ. ಆದು ಇವತ್ತಿನ ದಿವಸ ಆ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಬೇರೆ ಕಡೆಯವರೂ ಇದಕ್ಕೆ ಒಪ್ಪಿಕೊಂಡಿದ್ದಾರೆ. ಕೆಲವು ನಗರಸಭೆಗಳಲ್ಲಿ ವಿಪರೀತವಾಗಿ ಬರುತ್ತದೆ. ಆದೇ ರೀತಿ ಪುರಸಭೆಗಳಿಗೂ ಅವರದೇ ಆದ ಸಂಪನ್ಮೂಲಗಳಿವೆ. ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಆ ವಿಷಯ ಅವತ್ತಿನ ದಿವಸವೂ ಬಂತು. ಪೂರ್ತಿಯಾಗಿ ಕಡಿಮೆ ಮಾಡುವಂತಹ ಮನಸೂದೆಯನ್ನು ನಾವು ತೆಗೆದುಕೊಂಡು ಬರುತ್ತೇವೆಂದು ಹೇಳಿದರು. ಅವರಿಗೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಸ್ವಲ್ಪಮಟ್ಟಿಗೆ ಬಿಡುಗಡೆ ಮಾಡಿದ್ದಾರೆ. ಎರಡನೆಯದಾಗಿ ಇದನ್ನು ನೀವೂ ಸಹ ಮಾಡಿದರೆ, ನಿಜಕ್ಕೂ ತೆರಿಗೆಯನ್ನು ಜನಗಳ ಮೇಲೆ ಹಾಕಿದ ಹಾಗೆ ಆಗುತ್ತದೆ. ಇವತ್ತಿನ ದಿವಸ ಈಗಾಗಲೇ ಕರಭಾರ ಬಹಳ ಜಾಸ್ತಿಯಾಗಿದೆ ಎಂಬುದು ತಮಗೂ ಗೊತ್ತಿದೆ. ನಮ್ಮ ದೇಶದಲ್ಲಿ ಪ್ರತ್ಯಕ್ಷ ತೆರಿಗೆ ಹಾಗೂ ಪರೋಕ್ಷ ತೆರಿಗೆ ಹೀಗೆ ಎರಡು ವಿಧದ ತೆರಿಗೆಗಳನ್ನು ಹಾಕಿದ್ದಾರೆ. ಪ್ರತ್ಯಕ್ಷ ತೆರಿಗೆಗಳು ಶೇಕಡ ೩೫ ರಿಂದ ೪೦% ಬರುತ್ತದೆ. ಇದಕ್ಕಿಂತ ಹೆಚ್ಚಿಗೆ ಪರೋಕ್ಷ ತೆರಿಗೆ ಇದೆ. ಎಕ್ಸೈಜ್ ಡ್ಯೂಟಿ, ಸೇಲ್ಸ್‌ಟ್ಯಾಕ್ಸ್ ಈ ರೀತಿಯ ತೆರಿಗೆಗಳೇ ಜಾಸ್ತಿ. ಈ ತರಹದ ತೆರಿಗೆಗಳ ಜೊತೆಗೆ ಇದೊಂದನ್ನು ಕೂಡ ಸೇರಿಸಿದ್ದಾರೆ. ಮತ್ತೆ ಇನ್ನೊಂದು ಮಾತನ್ನು ಜನತಾ ಪಕ್ಷದವರು ಕೊಟ್ಟರು. ೧೯೮೩ನೇ ಇಸವಿಯಲ್ಲಿ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಈ ಬಗ್ಗೆ ಕೊಟ್ಟಂತಹ ಭರವಸೆಯಂತೆ ನಡೆದುಕೊಳ್ಳಬೇಕಾಗಿತ್ತು ಎಂಬುದಾಗಿ ಸ್ಪಷ್ಟವಾಗಿ ಹೇಳಬೇಕಾಗಿದೆ. ೧೯೭೬ರಲ್ಲೂ ಈ ಪ್ರಶ್ನೆ ಬಂತು. ಆವಾಗಲೂ ಇದನ್ನೇ ಪ್ರಸ್ತಾಪ ಮಾಡಿದ್ದೇನೆ. ಆಗಲೂ ಕೂಡ ಇದನ್ನು ವಿರೋಧ ಮಾಡಿದ್ದೇನೆ. ಇದು ವೈಜ್ಞಾನಿಕವಾದ ರೀತಿಯ ತೆರಿಗೆಯಲ್ಲ ಎಂದು. ಅವತ್ತು ಮಾನ್ಯ ಎಂ. ವೈ. ಘೋರ್ಪಡೆಯವರು ರಾಜ್ಯ ಹಣಕಾಸಿನ ಮಂತ್ರಿಗಳಾಗಿದ್ದರು. ಅವರು ಹೇಳಿದರು, ನೀವು ಹೇಳುವುದರಲ್ಲಿ ಅರ್ಥವಿದೆ ಆದರೆ ನಮಗೆ ಇದರಿಂದ ವರಮಾನ ಬರುತ್ತದೆ ಆದ್ದರಿಂದ ನೋಡುತ್ತೇವೆಂದು ಹೇಳಿದ್ದರು. ಸರ್ಕಾರಕ್ಕೆ ವರಮಾನ ಬರುತ್ತದೆಂದು ಸಿಕ್ಕ ಹಾಗೆಲ್ಲ ತೆರಿಗೆಯನ್ನು ಹಾಕುವಂತಹದ್ದು ಸರಿಯಾದುದಲ್ಲ. ಮೂಲಭೂತವಾಗಿ ತಪ್ಪು ಅಂತ ಹೇಳಿದ ಮೇಲೆ ಆಮೇಲೆ ಪರಿಶೀಲನೆ ಮಾಡುತ್ತೇವೆಂದು ಹೇಳಿ ಸ್ವಲ್ಪ ಮಟ್ಟಿನ ರಿಯಾಯಿತಿಯನ್ನು ನೀವು ಕೊಟ್ಟ ಹಾಗೆಯೇ ಅವರೂ ಕೊಟ್ಟರು. ನಂತರ ಶ್ರೀಮಾನ್ ಹೆಗಡೆಯವರ ಸರ್ಕಾರ ೧೯೮೩ರಲ್ಲಿ ಬಂತು. ಆವಾಗಲೂ ಇದರ ಬಗ್ಗೆ ಪುನಃ ಚರ್ಚೆಯಾಯಿತು. ಅದಕ್ಕಿಂತ ಮುಂಚೆ ಹೋದ ಸಾರಿ ಇವರು ಕೊಟ್ಟಂತಹ ಚುನಾವಣಾ ಪ್ರಣಾಳಿಕೆಯ ಭರವಸೆಯನ್ನು ಕಾರ್ಯಗತ ಮಾಡಲಿಲ್ಲ. ಆದರ ಬದಲು ವೃತ್ತಿ ತೆರಿಗೆಯನ್ನು ಇನ್ನೂ ಉತ್ತಿಸಿಕೊಂಡು ಬಂದಿದ್ದಾರೆ. ಚುನಾವಣೆಯಲ್ಲಿ ಕೊಟ್ಟಂತಹ ವಚನಕ್ಕೆ, ವಚನ ಭ್ರಷ್ಟರಾಗಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ತೆರಿಗೆಯಿಂದ ಎಷ್ಟು ವರಮಾನ ಬರುತ್ತದೆ ಇವರಿಗೆ ? ಪೂರ್ತಿಯಾಗಿ ಇದರಲ್ಲಿ ಹೇಳಲಿಲ್ಲ. ಆದರೂ ನನಗೆ ಬಂದಿರುವ ಮಾಹಿತಿ ಪ್ರಕಾರ ೫೦ ರಿಂದ ೫೫ ಕೋಟಿ ರೂಪಾಯಿಗಳವರೆಗೆ ಮಾತ್ರ ಬರುತ್ತದೆಂದು ಕಾಣುತ್ತದೆ. ಅದಕ್ಕಿಂತ ಜಾಸ್ತಿ ಬರಲಾರದು. ಅಷ್ಟೇ ಅಂತ ಕಾಣುತ್ತದೆ. ಇಷ್ಟು ಇರಬೇಕಾದರೆ, ಇದನ್ನು ಮುಂದುವರಿಸಿಕೊಂಡು ಹೋಗುತ್ತಾ, ಸಾಮಾನ್ಯ ಜನಗಳ ಮೇಲೆ ಈ ವೃತ್ತಿ ತೆರಿಗೆಯನ್ನು ಹಾಕುವುದು ಎಷ್ಟು ನ್ಯಾಯ ? ಎಷ್ಟು ಸಮಂಜಸ ಎಂಬುದನ್ನು ನೀವೇ ಯೋಚನೆ ಮಾಡಿ. ನನಗಂತೂ ಇದನ್ನು ಕೈಬಿಡುವುದು ಬಹಳ ಬಳ್ಳಿಯದು ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಈ ವೃತ್ತಿ ತೆರಿಗೆಯನ್ನ ಇನ್ನೂ ಮುಂದ ವರಿಸಿಕೊಂಡು ಹೋಗುವಂತಹದ್ದು ಸರಿಯಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮೂರನೆಯ ಅಂಶ ಏನೆಂದರೆ, ಈ ತೆರಿಗೆಯನ್ನು ಬೇರೆ ರಾಜ್ಯಗಳಲ್ಲೂ ತೆಗೆದುಕೊಂಡು ಬರಬೇಕೆಂದು ಪ್ರಯತ್ನ ಮಾಡಿದ್ದರು. ಆದರೆ ಅನೇಕ ರಾಜ್ಯಗಳು ಇದನ್ನು ಕೈಬಿಟ್ಟಿದ್ದಾರೆ. ನನಗೆ ತಿಳಿದ ಮಟ್ಟಿಗೆ ಹಿಮಾಚಲ ಪ್ರದೇಶ ರಾಜಾಸ್ಥಾನ ಈ ರಾಜ್ಯಗಳಲ್ಲೂ ಈ ಪ್ರಶ್ನೆ ಚರ್ಚೆಗೆ ಬಂದು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿ ನಂತರ ಈ ವೃತ್ತಿ ತೆರಿಗೆಯನ್ನು ಹಾಕುವುದು ಸರಯಲ್ಲ ಎಂಬ ತೀರ್ಮಾನಕ್ಕೆ ಬಂದು ಅದನ್ನು ಕೈಬಿಟ್ಟಿದ್ದಾರೆ. ಈ ರೀತಿ ಇರಬೇಕಾದರೆ,

ನಮ್ಮ ಈ ರಾಜ್ಯದಲ್ಲಿ ಇದು ಪ್ರಗತಿಪರವಾದ ಹಾಗೂ ಎಲ್ಲರಿಗೂ ಮಾರ್ಗದರ್ಶನವಾಗುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಹೇಳುವ ಜನತಾ ಪಕ್ಷದ ಸರ್ಕಾರ ಜನತೆಗೆ ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳುವ ಸರ್ಕಾರ ಈ ಹೆಸರಿನಲ್ಲಿ ತೆರಿಗೆಯನ್ನು ಹಾಕುವುದು ಎಷ್ಟು ಸಮಂಜಸವಾಗುತ್ತದೆ ? ಬೇರೆಯವರನ್ನು ತೋರಿಸುವುದಕ್ಕಿಂತ ನೀವು ಇದನ್ನು ತಿಳಿದುಕೊಳ್ಳಬೇಕಾಗಿದೆ. ಎಷ್ಟು ಸಮಂಜಸ ಎನ್ನುವುದನ್ನು. ಇದು ಸಮಂಜಸವೂ ಅಲ್ಲ. ಮತ್ತೆ ಇದರಿಂದ ಪ್ರಯೋಜನವೂ ಇಲ್ಲ. ಈ ವೃತ್ತಿ ತೆರಿಗೆಯೊಳಗೆ ಇನ್ನೊಂದು ಅಂಶವನ್ನು ಸೇರಿಸಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತೆ ನಾವು ಎಷ್ಟೇ ಹೇಳಿದರೂ ಈ ಪ್ರಸೂದೆಯನ್ನು ಪಾಸ್ ಮಾಡೇ ಮಾಡುತ್ತಾರೆ ಎಂಬುದು ನನಗೆ ಗೊತ್ತಿದೆ. ಮೂರನೆಯದಾಗಿ ಈ ವೃತ್ತಿ ತೆರಿಗೆಯಲ್ಲಿ ಯಾರ್ಯಾರನ್ನು ಸೇರಿಸಿದ್ದಾರೆಂದು ಕೆಲವರು ಹೊಸಬರನ್ನೂ ಕೂಡ ಇದರಲ್ಲಿ ಸೇರಿಸಿಬಿಟ್ಟಿದ್ದಾರೆ ಫೋಟೋ ಲ್ಯಾಬೊರೇಟರೀಸ್, ಫಿಲಂ ಪ್ರೊಸೆಸ್ಸಿಂಗ್ ಲ್ಯಾಬೋರೇಟರೀಸ್ ಹಾಗೂ ಫೋಟೋ ಸ್ಟುಡಿಯೋ ಇವರು ವರ್ಷಕ್ಕೆ ೨೫೦ ರೂ. ಗಳನ್ನು ವೃತ್ತಿ ತೆರಿಗೆಯಾಗಿ ಕೊಡಬೇಕೆಂದು ಹೇಳಿದ್ದಾರೆ. ಫೋಟೋ ಸ್ಟುಡಿಯೋ ಏನಿದೆ, ಸಣ್ಣ ಸಣ್ಣ ಸ್ಟುಡಿಯೋಗಳನ್ನು ಇಟ್ಟುಕೊಂಡು ಬೆಂಗಳೂರು ನಗರದಲ್ಲೇ ಅಲ್ಲ, ಇತರೆ ಕಡೆಗಳಲ್ಲೂ ಕೂಡ ಅಲ್ಲಲ್ಲೇ ಫೋಟೋ ಸ್ಟುಡಿಯೋಗಳನ್ನು ಇಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ.

ಶ್ರೀ ಟಿ. ಎಂ.

ಫೋಟೋ ಫಿಲಂ ಆಗಲಿ, ಅದಕ್ಕೆ ಬೇಕಾದ ಸಾಮಗ್ರಿಗಳಾಗಲಿ ಎಲ್ಲವೂ ಬಹಳ ದುಬಾರಿಯಾಗಿದೆ. ಹೀಗೆ ದುಬಾರಿಯಾಗಬೇಕಾದರೆ ಅವರಿಗೆ ಇನ್ನೊಂದು ತೆರಿಗೆಯ ಹೊರೆಯನ್ನು ಹೊರಿಸುವುದು ನ್ಯಾಯವೇ ? ಜಿ. ಕೆ. ಕಂಪನಿಯಂಥ ದೊಡ್ಡ ದೊಡ್ಡ ಫೋಟೋ ಸ್ಟುಡಿಯೋಗಳನ್ನು ಇಟ್ಟು ಕೊಡಲು ಹೇರ್‌ವಾಗಿ ಲಾಭ ಮಾಡುವವರು ಕೆಲವರು ಇದ್ದಾರೆ. ಅಂಥವರ ಮೇಲೆ ತೆರಿಗೆ ಹಾಕಿದರೆ ಅದು ಸಮಾಚಾರ. ಅವನ್ನು ಬಿಟ್ಟು ಸಣ್ಣವರು ದೊಡ್ಡವರು ಎಲ್ಲರನ್ನು ಒಂದೇ ಮಾಡಿ ಈ ರೀತಿ ತೆರಿಗೆ ಹೊರಿಸುವುದೂ ನ್ಯಾಯವಲ್ಲ. ಇದು ತೆರಿಗೆಯ ನೀತಿಗೆ ವಿರೋಧ. ಅವರು ಹೇಳುವ ತತ್ವ ಒಂದು ಮಾಡುವ ಕೃತಿ ಇನ್ನೊಂದು ಎಂದು ಹೇಳಬೇಕಾಗುತ್ತದೆ. ಡ್ರೈಕ್ಲೀನರ್ ಜರ್ನಲಿಸ್ಟ್ ಇವರುಗಳ ಮೇಲೂ ತೆರಿಗೆ ಹಾಕಿದ್ದೀರಿ. ಪತ್ರಿಕೋದ್ಯಮಿಗಳು ೨೫೦ ರೂಪಾಯಿ ತೆರಿಗೆ ಕೊಡಬೇಕಾಗಿದೆ. ಇವತ್ತಿನ ದಿವಸ ಅನೇಕ ತರಹದ ತೆರಿಗೆಗಳನ್ನು ಜನಸಾಮಾನ್ಯರು ಕೊಡುತ್ತಿದ್ದಾರೆ. ವರಮಾನ ತೆರಿಗೆ, ಎಕ್ಸೈಜ್ ಡ್ಯೂಟಿ, ಸೇಲ್ಸ್ ಟ್ಯಾಕ್ಸ್, ನೀರಿನ ದರ, ವಿದ್ಯುತ್ ಚಾರ್ಜ್, ಬಸ್ ದರ ಹೀಗೆ ಜನಸಾಮಾನ್ಯರಿಂದ ಕೊಡತಕ್ಕ ಪ್ರತಿಯೊಂದು ದುಬಾರಿಯಾಗಿದೆ. ಆದರ ಮೇಲೆ ಈ ತರಹ ತೆರಿಗೆಯನ್ನು ಹೊರಿಸುವುದು ನ್ಯಾಯವೇ ? ಸಾಮಾನ್ಯವಾಗಿ ಸಾಮಾನ್ಯ ವರ್ಗದ ಹೆಣ್ಣುಮಕ್ಕಳು ಯಾರೂ ಶೃಂಗಾರ ಮಾಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಸದಾಶಿವ ನಗರದಲ್ಲಿರತಕ್ಕ ಶ್ರೀಮಂತರ ಮನೆತನದ ಹೆಣ್ಣುಮಕ್ಕಳು ಶೃಂಗಾರ ಮಾಡಿಸಿಕೊಳ್ಳುವುದಕ್ಕೆ ಹೋಗುತ್ತಾರೆ. ಬಹುಶಃ ಇದು ಲೀಲಾದೇವಿ ಪ್ರಸಾದ್‌ರವರಿಗೆ ಗೊತ್ತಾಗಿರಬಹುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಈ ತೆರಿಗೆಯಿಂದ ಸಾಮಾನ್ಯ ಹೆಣ್ಣುಮಕ್ಕಳಿಗೆ ಏನೂ ತೊಂದರೆಯಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೋಸ್ಕರ ಅದರ ಬಗ್ಗೆ ಒಪ್ಪಿಕೊಳ್ಳುತ್ತೇನೆ ಆರ್ಡಿನರಿ ಹೇರ್ ಡ್ರಸರ್ಸ್‌ಗೆ ಇದನ್ನು ಕೈಬಿಡಬೇಕು. ಜರ್ನಲಿಸ್ಟ್‌ಗಳು, ಡ್ರೈಕ್ಲೀನರ್ಸ್, ಫೋಟೋ ಸ್ಟುಡಿಯೋ ಮತ್ತು ಸಣ್ಣ ಸಣ್ಣ ಲಾಬೋರೇಟರಿಗಳ ಮೇಲೆ ತೆರಿಗೆ ಹಾಕಿರುವುದು ಸರಿಯಲ್ಲ. ಈ ತೆರಿಗೆಗೆ ಮೂಲಭೂತವಾದ ವಿರೋಧ ಇದೆ ಎಂದು ಹೇಳಬೇಕಾಗಿದೆ. ಮುಖ್ಯಮಂತ್ರಿಗಳು ಬಸವನಗುಡಿಯಲ್ಲಿ ಭಾಷಣ ಮಾಡುತ್ತಾ ಹೇಳಿದ ಮಾತನ್ನು ಇಲ್ಲಿ ಹೇಳಲಿಲ್ಲವೆಂದು ಹೇಳಿದರು. ನಾನು ಅಂದಿನ ಸಭೆಯಲ್ಲಿದ್ದೆ. ಅವರು ಹೇಳಿದ ಮಾತನ್ನು ನಾನು ಕೇಳಿದ್ದೇನೆ ಮತ್ತು ಜನರೆಲ್ಲರೂ ಕೇಳಿದ್ದಾರೆ. ಅಂದು ಸಭೆಯಲ್ಲಿದ್ದ ಜನರು ವೃತ್ತಿ ತೆರಿಗೆಯನ್ನು ಕಿತ್ತು ಹಾಕಿ ಎಂದು ಹೇಳಿದರು, ಆದಕ್ಕೆ ಮಾಂಖ್ಯ ಮಂತ್ರಿಗಳು ಕಿತ್ತುಹಾಕುತ್ತೇನೆಂದು ಹೇಳಿದರು. ಆದರೆ ಈಗ ಅದನ್ನು ಕಿತ್ತು ಹಾಕದಿರುವುದಿಲ್ಲವೆಂದು ಹೇಳುತ್ತಾರೆ. ಇವರು ಹೇಳುವುದು ಒಂದು ಮಾಡುವುದು ಒಂದು ಆಗಿದೆ. ಆದ್ದರಿಂದ. ದಯವಿಟ್ಟು ಪಜನಭಷ್ಟರಾಗದೆ ಅದನ್ನು ಕಿತ್ತು ಹಾಕಿ ಎಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೆ, ನಾನು ಈ ತುರ್ತೂಪೆಯನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಮೊಟ್ಟ ಮೊದಲನೆಯದಾಗಿ ಹೇಳುವುದಾದರೆ, ಜನತಾ ಪಕ್ಷದವರು ಜನತೆಗೆ ಕೊಟ್ಟ ಆಶ್ವಾಸನೆಯನ್ನು ಗೋಲ್‌ಮಾಲ್ ಮಾಡಿದ್ದಾರೆ. ಕಾಂಗ್ರೆಸ್ಸಿನವರು ಹೊರಿಸಿದಂತಹ ವೃತ್ತಿ ತೆರಿಗೆಯನ್ನು ತೆಗೆದು ಹಾಕುತ್ತೇವೆಂದು ಹೇಳಿ ಈ ರೀತಿ ಮಾಡುತ್ತಿರುವುದನ್ನು ನೋಡಿ ಇವರು ಜನತೆಯನ್ನು ವಂಚಿಸಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಬಾರದು. ಈ ರೀತಿ ಮಾಡುವುದು ನಿಮ್ಮ ಸರ್ಕಾರಕ್ಕೆ ಭೂಷಣವಲ್ಲ. ಎರಡನೆಯದಾಗಿ ಹೇಳುವುದಾದರೆ, ಮಹಾತ್ಮ ಗಾಂಧಿಯವರ ಪೌಲ್ಯಾಧಾರಗಳನ್ನು ಅನುಸರಿಸಿ ಕೆಲಸ ಮಾಡತಕ್ಕವರು. ಅವರು ಏನು ಹೇಳಿದ್ದಾರೆಂದರೆ ಯಾವ ಸರ್ಕಾರ ಕಡಿಮೆ ತೆರಿಗೆಯನ್ನು ಹಾಕುತ್ತದೋ ಅದೇ ಉತ್ತಮವಾದ ಸರ್ಕಾರ ಎಂದು ಹೇಳಿದ್ದಾರೆ. ಆದರೆ ಕರ್ನಾಟಕದಲ್ಲಿ ಏನಾಗಿದೆ ಎಂದರೆ ಇಲ್ಲಿರುವಷ್ಟು ತೆರಿಗೆಗಳು ಭಾರತ ದೇಶದಲ್ಲಿ ಎಲ್ಲಿಯೂ ಇಲ್ಲ. ಇದು ಅತಿ ಹೆಚ್ಚಾಗಿದೆ ಎಂಬುದನ್ನು ಮುಖ್ಯ ಮಂತ್ರಿಗಳು ಕೂಡ ಒಪ್ಪಿದ್ದಾರೆ. ಆದರೆ ಆಂಕಿಸಂಖ್ಯೆಗಳನ್ನು ಕೊಡುವಾಗ ಕಡಿಮೆ ಇದ್ದುದನ್ನು ಹೇಳುತ್ತಾರೆ. ಹೆಚ್ಚಿದ್ದನ್ನು ಬಿಡುತ್ತಾರೆ. ಈ ರೀತಿ ಬುದ್ಧಿವಂತಿಕೆ ಉಪಯೋಗ ಮಾಡಿ ಸದನವನ್ನು ತಪ್ಪು ದಾರಿಗೆ ಎಳೆಯುವಂತ ದಾಟಿಯಲ್ಲಿ ಕೆಲಸ ನಡೆದಿದೆ. ವೃತ್ತಿ ತೆರಿಗೆಯ ಬಗ್ಗೆ ಬಹಳ ಬುದ್ಧಿವಂತಿಕೆಯಿಂದ ಹೇಳಿದರು. ಮೊದಲು ಏನು ಒಂದು ತೆರಿಗೆ ಇತ್ತು ಅದನ್ನು ಮಾನ್ಯ ಕೃಷ್ಣನ್ ಅವರು ಹೆಚ್ಚು ಮಾಡಬೇಕೆಂದು ಹೇಳಿದರು. ಅವಕ್ಕೆ ಮಾಡಿದ್ದೇವೆ. ಅವರು ಬೇಸಿಕ್ ಸ್ಯಾಲರಿಯಲ್ಲಿ ಅಷ್ಟೇ ತೆಗೆದುಕೊಳ್ಳಿ ಎಂದು ಹೇಳಿದರು, ಆದ್ದರಿಂದ ಬೇಸಿಕ್ ಸ್ಯಾಲರಿಯನ್ನು ತೆಗೆದುಕೊಂಡಿದ್ದೇವೆಂದು ಬಹಳ ಬುದ್ಧಿವಂತಿಕೆಯಿಂದ ಹೇಳಿದರು. ಮಾನ್ಯ ಕೃಷ್ಣನ್‌ರವರು ಆ ರೀತಿ ಹೇಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಸರ್ಕಾರೀ ನೌಕರರ ಪರಿಸ್ಥಿತಿ ಏನಾಗಿದೆ ಎಂದರೆ ಪಗಾರ ಸಾವಿರ ಇದ್ದರೆ ಕೈಗೆ ಬಂದು ೪೦೦ ಆಗಿರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಫೋರ್ಪಡೆಯವರು ವಿತ್ತಮಂತ್ರಿಗಳಾಗಿದ್ದಾಗ ಅವರಿಗೆ ರಿಯಾಯಿತಿಯನ್ನು ಕೊಟ್ಟರು. ಈಗ ಇವರು ಅದಕ್ಕೆ ತಕರಾರು ತಂದು ನೋಟಿಫಿಕೇಷನ್ ಹೊರಡಿಸಿ ತಮ್ಮದೇ ಆದ ರೀತಿನುಲ್ಲಿ ತೆರಿಗೆ ಹಾಕಿ ಮತ್ತೊಬ್ಬರನ್ನು ಸರಿ ಮಾಡುತ್ತಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಇದರಿಂದ ಯಾರಿಗೆ ಲಾಭವಾಗುತ್ತಿದೆ ಎಂಬುದರ ಬಗ್ಗೆ ಗಮನ ಹರಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಯಾವುದೇ ಲಾಭ ದೊರೆಯುವುದಿಲ್ಲ. ಸಾಮಾನ್ಯ ಜರ್ನಲಿಸ್ಟ್ ತೆಗೆದುಕೊಳ್ಳಿ. ಇವತ್ತು ಅವನು ೫೦ ರೂಪಾಯಿ ತೆರಿಗೆ ಕೊಡಬೇಕು. ಮತ್ತೊಬ್ಬ ಕಡಿಮೆ ಕೊಡುವವನಿಗೆ ಹತ್ತು ರೂಪಾಯಿ ಹೆಚ್ಚಿಗೆ ಮಾಡಿದ್ದೀರಿ. ಇವರನ್ನು ಯಾವ ರೀತಿ ಹುಡುಕುತ್ತೀರಿ ? ಇವರಿಗೇನಾದರೂ ರಿಜಿಸ್ಟ್ರೇಷನ್ ಇದೆಯೆ ? ಇವರು ಯಾವುದರಲ್ಲಿ ಜರ್ನಲಿಸ್ಟ್ ಎಂದು ಗೊತ್ತುಮಾಡುವ ಅಧಿಕಾರ ಸರ್ಕಾರಕ್ಕಿದೆಯೇ ? ಗೊತ್ತುಮಾಡುವ ಅಧಿಕಾರ ಇದ್ದರೆ ಮೆಮೊರ್ಯಾಂಡಂನಲ್ಲಿ ಏತಕ್ಕೆ ಸ್ಪಷ್ಟವಾಗಿ ಬರೆಯಲಿಲ್ಲ ? ಹೊಸದಾಗಿ ಏನಾದರೂ ಮಾಡುತ್ತೀರಾ ? ಅಥವಾ ಅಂತರ್ಗತವಾಗಿ ಕಂಡು ಹಿಡಿಯುವ, ದೆವ್ವ-ಭೂತಗಳನ್ನು ವಶಪಡಿಸಿಕೊಂಡ ಜನರಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ಪತ್ರಿಕಾಕರ್ತರಲ್ಲಿ ಎರಡು ವರ್ಗ ಇದೆ. ಒಂದು ಆಡ್ಮಿನಿಸ್ಟ್ರೇಷನ್, ಇನ್ನೊಂದು ಜರ್ನಲಿಸ್ಟ್. ಜರ್ನಲಿಸ್ಟ್‌ಗಳಿಗೆ ಯಾವುದೇ ರೀತಿಯ ಭತ್ಯ ಇರುವುದಿಲ್ಲ. ಅವರಿಗೆ ಕನ್ಸಾಲಿಡೇಟೆಡ್ ಪೇ ಕೊಡುತ್ತಾರೆ. ಅವರೂ ಸಹ ೫೦ ರೂಪಾಯಿ ಕೊಡುತ್ತಿದ್ದಾರೆ, ಅದನ್ನು ೧೦ ರೂಪಾಯಿ ಜಾಸ್ತಿ ಮಾಡಿದ್ದೀರಿ. ಆಫೀಸಿನಲ್ಲಿ ಕೆಲಸ ಮಾಡಿಕೊಂಡು ಸೂಪರ್ ಮ್ಯಾನೇಜರ್ ಆಗಿರುವವನು ಹೆಚ್ಚು ಪಗಾರ ತೆಗೆದುಕೊಂಡರೂ ೩೦ ರೂಪಾಯಿ, ಆದರೆ ಇವನಿಗೆ ೬೦ ರೂಪಾಯಿ, ಇದು ಯಾವ ಕಾರಕತಾಳಿ ನ್ಯಾಯ ? ಇದರ ಬಗ್ಗೆ ಕಾನೂನು ಮಂತ್ರಿಗಳು ಬಹಳ ಕೂಲಂಕುಷವಾಗಿ ವಿಚಾರ ಮಾಡಬೇಕು. ಜನ ಬಂದು ನಿಮ್ಮನ್ನು ಸರ್ಕಾರ ಎಂದು ನೋಡುವುದಿಲ್ಲ. ನೀವು ಏನಾದರೂ ಒಂದು ಹೊಸ ಗೊಂದಲ ತರುತ್ತೀರಿ ಎಂದು ನೋಡುತ್ತಿದ್ದಾರೆ. ತಮಗೆ ಬೇಕಾಗಿದ್ದಂತಹ ಕಾಂಗ್ರೆಸ್ ಪಕ್ಷವನ್ನು ತ್ಯಾಗ ಮಾಡಿ ಕೂರಿಸಿದ್ದಾರೆ. ನಿಮಗೆ ನನ್ನ ಮಾತಿನಿಂದ ನಗು ಬರಬಹುದು, ಇವತ್ತು ನೀವು ಅಧಿಕಾರದಲ್ಲಿದ್ದೀರಿ. ಜನತೆ ನಿಮ್ಮನ್ನು ಶಪಿಸಿಬಾರದೆಂದು ಹೇಳುತ್ತಿದ್ದೇನೆ. ಯಾವುದಾದರೊಂದು ನೌಕರಿ ಮಾಡುವ ವ್ಯಕ್ತಿ ಯನ್ನು ತೆಗೆದುಕೊಳ್ಳಿ ಅವನು ತಿಂಗಳಿಗೆ ಸಾವಿರ ರೂಪಾಯಿ ಪಗಾರ ತೆಗೆದುಕೊಳ್ಳಬಹುದು.

ಅವನಿಗೆ ಇದು ಅನ್ವಯಿಸುವುದಿಲ್ಲ ಆದೇ ೧೨೦೦ ರೂಪಾಯಿ ಪಗಾರ ತೆಗೆದುಕೊಳ್ಳುವವನಿಗೆ ಅನ್ವಯಿಸುತ್ತದೆ. ಆದೇ ಇನ್ನೊಬ್ಬ ೫೦೦೦ ಸಾವಿರ ರೂಪಾಯಿ ಪಗಾರ ತೆಗೆದುಕೊಳ್ಳುವ ನೌಕರನಿರಂತಾನೆ ಅವನಿಗೆ ಕೇಂದ್ರ ಸರ್ಕಾರ ಕಂತುಗಳ ಪ್ರಕಾರ ತುಟ್ಟಿಭತ್ಯವನ್ನು ಕೊಟ್ಟಂತೆ ರಾಜ್ಯ ಸರ್ಕಾರವೂ ಕೊಡಬೇಕಾಗುತ್ತದೆ. ಇವತ್ತು ೮೦೦ ರೂಪಾಯಿ ಪಗಾರ ತೆಗೆದುಕೊಳ್ಳುವವನ ಕೈಗೆ ೩೦೦ ರೂಪಾಯಿ ಸಿಗುತ್ತಿರುತ್ತದೆ. ನೌಕರರಿಗೆ ಮೊದಲೇ ಪಗಾರ ಕೊಡುವುದು ಕಡಿಮೆ. ಅದರ ಮೇಲೆ ನೀವು ತೆರಿಗೆಗಳನ್ನು ಹಾಕಿದರೆ ಹೇಗೆ ? ಸರಮಾನ ತೆರಿಗೆ ಹಾಕುತ್ತೀರಿ, ವೃತ್ತಿ ತೆರಿಗೆ ಹಾಕುತ್ತೀರಿ. ಒಟ್ಟಿನಲ್ಲಿ ತಮಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನು ಮಾಡುತ್ತೀರಿ. ನಿಮ್ಮ ಸರ್ಕಾರಕ್ಕೆ ಹಣ ಇಲ್ಲವೆಂದರೆ ತೆರಿಗೆ ಹಾಕಿ. ಆದರೆ ಹಾಕುವಾಗ ಯಾರಿಗೆ ಹಾಕಬೇಕು ಎಂಬುದನ್ನು ನೋಡಿಕೊಂಡು ಹಾಕಿ. ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದು ಮಾಡಿ ಹೆಚ್ಚು ಪಗಾರ ತೆಗೆದುಕೊಳ್ಳುವವನನ್ನು ಮುಕ್ತ ಮಾಡಿ ಬಡವರನ್ನು ಹೀನ ಸ್ಥಿತಿಗೆ ತಂದರೆ ನಿಮ್ಮ ಸರ್ಕಾರ ನಿಜವಾಗಿ ಸರಿಯಾದ ಮಾರ್ಗದಲ್ಲಿ ಹೋಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ೧೨೦೦ರ ಮೂಲ ವೇತನಕ್ಕೆ ಮೇಲ್ಪಟ್ಟು ೧೫೮೦ ರೂಪಾಯಿ ಸಂಬಳ ತೆಗೆದುಕೊಳ್ಳುವವರಿಗೆಲ್ಲ ತಿಂಗಳಿಗೆ ೧೫ ರೂಪಾಯಿ ವೃತ್ತಿ ತೆರಿಗೆ ಹಾಕಿದ್ದೀರಿ. ಅವರಿಗೆ ತುಟ್ಟಿಭತ್ಯವನ್ನಾದರೂ ಏತಕ್ಕೆ ಹೆಚ್ಚು ಮಾಡಿದಿರಿ ? ಪಗಾರವನ್ನು ಏತಕ್ಕೆ ಹೆಚ್ಚು ಮಾಡುತ್ತೀರಿ ? ಅವನಿಗೆ ಗೃಹೋಪಯೋಗ ಪದಾರ್ಥಗಳ ಬೆಲೆ ಹೆಚ್ಚಾಗಿದೆ. ಅವನಿಗೆ ಸಂಸಾರ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ ಎಂದು ವೇತನ ಹೆಚ್ಚು ಮಾಡುತ್ತೇವೆಂದು ಒಂದು ಕಡೆ ಹೇಳುವುದು.

ಆದರೆ ಇವತ್ತಿನ ದಿವಸ ಆದೇರೀತಿಯಲ್ಲಿ ಕರಭಾರವನ್ನು ಹೆಚ್ಚು ಮಾಡಿ ಹೀರಿಕೊಳ್ಳುವುದು ಏತಕ್ಕೋಸ್ಕರ ? ೧೫೦೦ ರೂಪಾಯಿ ಪಗಾರ ತೆಗೆದುಕೊಳ್ಳುತಕ್ಕ ಮನುಷ್ಯನ ಮನೆಯಲ್ಲಿ ತಿಂಗಳಿಗೆ ೧೫ ರೂಪಾಯಿ ತೆರಿಗೆ ವಸೂಲು ಮಾಡುತ್ತೀರಿ. ಅವನ ಮಕ್ಕಳಿಗೆ ೩೦ ರೂಪಾಯಿನ ತೆರಿಗೆ ವಸೂಲು ಮಾಡುತ್ತೀರಿ. ಅವನ ಮಕ್ಕಳಿಗೆ ೩೦ ರೂಪಾಯಿನ ಅರಿವೆ ಕೊಡುತ್ತೀರಿ. ಅವರಿಂದ ೧೫ ರೂಪಾಯಿ ತೆಗೆದುಕೊಂಡು ೩೦ ರೂಪಾಯಿನ ಅರಿವೆ ಕೊಡತಕ್ಕ ಧರ್ಮ ಏತಕ್ಕೆ ಬೇಕು ? ಹಣ ಇಲ್ಲದಿದ್ದರೆ ಧರ್ಮ ಮಾಡುವ ಕೆಲಸ ಬಂದ್ ಮಾಡಿ. ಏತಕ್ಕೋಸ್ಕರ ಈ ಕೆಲಸ ಮಾಡುತ್ತೀರಿ ? ಮಕ್ಕಳಿಗೆ ಕೊಡುವ ಅರಿವೆಯಲ್ಲಿ ಲಾಭ ಮಾಡಿಕೊಳ್ಳುವ ಸಲುವಾಗಿ ಇದನ್ನು ಮಾಡುತ್ತಿದ್ದೀರಾ ? ಹಾಗೇ ಧರ್ಮ ಮಾಡಿ ಕೀರ್ತಿ ಪಡೆಯುವಹಾಗಿದ್ದರೆ ಪಡೆಯಿರಿ. ದೇವರು ನಿಮಗೆ ಯಶಸ್ಸನ್ನು ಕೊಡಲಿ ಎಂದು ಆಶಿಸೋಣ. ಬಡವನಿಂದ ಹದಿನೈದು ರೂಪಾಯಿ ತಿಂಗಳಿಗೆ ಪಡೆದು ಅವನ ಜೀವನವನ್ನು ಇನ್ನಷ್ಟು ಕಷ್ಟಮಯವಾಗಿ ಮಾಡುವುದು ಸಾಧುವಾದುದಲ್ಲ. ನಾನು ಈ ವಿಚಾರದಲ್ಲಿ ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯಮಂತ್ರಿಗಳವರು ಮಹಾತ್ಮಗಾಂಧಿಯವರ ತತ್ವವನ್ನು ನಂಬತಕ್ಕವರು. ಮಾನ್ಯ ಲಕ್ಷ್ಮೀಸಾಗರ್ ಅವರು ಗಾಂಧಿ ತತ್ವವನ್ನು ಎಷ್ಟರಮಟ್ಟಿಗೆ ಪಾಲಿಸುತ್ತಾರೋ, ಅವರಿಗೆ ಅದು ಎಷ್ಟರಮಟ್ಟಿಗೆ ಒಗ್ಗಿದೆಯೋ ಗೊತ್ತಿಲ್ಲ. ಆದರೆ ಮಾನ್ಯ ಹೆಗಡೆಯವರು ಗಾಂಧಿ ತತ್ವವನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್ —ನಾನು ಮಹಾತ್ಮ ಗಾಂಧಿಯವರ ಆರ್ಥಿಕ ನೀತಿಯನ್ನು ವೇಶ ಹಾಕಿಕೊಂಡು ಅನುಷ್ಠಾನಕ್ಕೆ ತಂದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಲಕ್ಷ್ಮೀಸಾಗರ್ ಅವರು ಮೇಲೆ ಖಾದಿ ಬಟ್ಟೆ ಗಾಂಧಿ ಟೋಪಿ ಹಾಕಿಲ್ಲ. ಆತ್ಮದಲ್ಲಿ ಗಾಂಧಿ ತತ್ವವನ್ನು ಅನುಸರಿಸುವವರು.

ಅಧ್ಯಕ್ಷರು.—ಅವರು ಮೇಲೆ ಖಾದಿ ಹಾಕದಿದ್ದರೂ ಆತ್ಮದಲ್ಲಿ ಗಾಂಧಿ ತತ್ವ ಪಾಲಿಸುತ್ತಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮನುಷ್ಯನ ಹೃದಯ ತಿಳಿಯುವುದಕ್ಕೆ ಏನು ಎಕ್ಸ್‌ರೇ ಇದೆಯೇ ಸರ್ಕಾರವನ್ನು ನಡೆಸಲು ಜನ ಆರಿಸಿ ಕಳುಹಿಸುತ್ತಾರೆ. ಅವರು ತಪ್ಪು ಮಾಡಿದರೂ ಅವರನ್ನು ತೆಗೆಯುವುದಕ್ಕೆ ಅವಕಾಶವಿಲ್ಲ. ಐದು ವರ್ಷದ ವರೆಗೂ ಕೈಕಟ್ಟಿಕೊಂಡು ಕೂತುಕೊಳ್ಳಬೇಕು. ಸರ್ಕಾರ ಎಂಥದ್ದು ಎಂಬುದನ್ನು ತಿಳಿಯಬೇಕಾದರೆ ಅವರು ತರುವಂಥ ಕಾನೂನಿನಿಂದ ಸಾಧ್ಯ. ತಮಗೆ ಗೊತ್ತಿದೆ ಈ ಸರ್ಕಾರ ಬರುವುದಕ್ಕೆ ಬೆಳಕು ಚೆಲ್ಲಿದೆ ಅನುಕೂಲ ಮಾಡಿದವರು ಎಂದರೆ ಜರ್ನಲಿಸ್ಟ್. ಅವರು ಇದ್ದದ್ದು ಎಲ್ಲಾ ಕೂಡಿಸಿ ಬರೆದರು. ಇವರ ಬಗ್ಗೆ ಹರಿಶ್ಚಂದ್ರರು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಚಂದ್ರನನ್ನು ಭೂಮಿಗೆ ತರುತ್ತಾರೆ ಎಂದರೆ ಬರೆದರು. ಇದನ್ನು ನಂಬಿ

ಜನ ಇವರಿಗೆ ಓಟುಗಳನ್ನು ಕೊಟ್ಟರು. ಇಂಥ ಉಪಕಾರ ಮಾಡಿದವರಿಗೆ ಅಪಕಾರ ಮಾಡುವುದು ಯಾವ ನ್ಯಾಯ ?

ಶ್ರೀ ಸಿ. ಬೈರೇಗೌಡ.— ನೀವು ಎಷ್ಟು ಹೇಳಿದರೂ ಜನ ನಂಬುವುದಿಲ್ಲ ಬಿಡಿ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮೊಯಿಲಿಯವರನ್ನು ಪೇಚಿಗೆ ಸಿಕ್ಕಿಸಿದ್ದಿರಿ ಎಂದು ಮಾನ್ಯ ಹೆಗಡೆಯವರು ನಿಮ್ಮನ್ನು ಮಂತ್ರಿ ಮಾಡಿದ್ದಾರೆ. ನೀವು ಸುಮ್ಮನೆ ಕೂಡಿ. ನಿಮಗೆ ಇದೆಲ್ಲಾ ಗೊತ್ತಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ನೀವು ಅದಕ್ಕೆ ಭಾಗಿಯಾಗಿದ್ದರಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನಾನು ಮಾಡಿದ್ದರಲ್ಲಿ ಒಂದು ಭಾಗ ಮಾಡಿದರೂ ನಿಮಗೆ ಮೋಕ್ಷ ಸಿಗುತ್ತದೆ.

ಶ್ರೀ ಸಿ. ಬೈರೇಗೌಡ.—ನೀವೂ ಭಾಗಿಯಾಗಿ ಕೈಯಲ್ಲಿ ಏನೂ ಮಾಡುವುದಕ್ಕಾಗದೆ ಕೂತರಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನಾನು ಮಾಡಿದಷ್ಟು ಮಾಡದಿದ್ದರೂ ಮಾಡಿದ್ದನ್ನು ನೋಡು ವಷ್ಟು ಭಾಗ್ಯ ಬಂದರೆ ದೇವರು ನಿಮಗೆ ಸಾಕ್ಷಾತ್ಕಾರ ಮಾಡುತ್ತಾನೆ.

ಶ್ರೀ ಸಿ. ಬೈರೇಗೌಡ.—ನೀವು ಮಾಡಿದ್ದನ್ನು ನೋಡತಕ್ಕ ದುರ್ದೆಸೆ ಬರುವುದು ಮಾತ್ರ ಬೇಡ.

ಶ್ರೀ ಕೆ. ಎಚ್. ಪಾಟೀಲ್.—ನಿಮ್ಮಂಥ ಪಾಪಿಗಳು ನೋಡಬಾರದು ಬಿಡಿ. ಇವತ್ತು ತಾವು ಟ್ಯಾಕ್ಸ್ ಹಾಕಿದಂಥ ನೀತಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನರ್ಸಿಂಗ್ ಹೋಮಿಗೆ ಟ್ಯಾಕ್ಸ್ ಹಾಕಿದ್ದೀರಿ. ಸೆಂಟ್ರಲ್ ಗವರ್ನಮೆಂಟ್‌ನವರು ಹೇಳುತ್ತಾರೆ, ''ಅಪ್ಪ ರೊಕ್ಕ ಕೊಡ್ರೀಪೋ ಅದನ್ನು ಒಯ್ದು ಆಸ್ಪತ್ರೆ ಮಾಡಿರೋ'' ಎಂದು. ಪುಕ್ಕಸಟ್ಟೆ ಹಣ ಹೊಡೆದವರು ಯಾರು ಒಂದು ಒಂದು ಕಂಡೀಷನ್ ಹಾಕಿದ್ದಾರೆ. ಮೂರನೇ ಒಂದು ಭಾಗದ ಸ್ಕೀಮಿನಲ್ಲಿ ನಾವು ಇಷ್ಟು ಕೋಟಿ ರೂಪಾಯಿ ಕೊಡುತ್ತೇವೆ. ನೀವು ಇಷ್ಟು ಕೊಟ್ಟು ಆಸ್ಪತ್ರೆ ತೆರೆಯಿರಿ ಎಂದು ಹೇಳಿದರೂ ಅದನ್ನು ಉಪಯೋಗಿಸಿಕೊಳ್ಳದೆ ನರ್ಸಿಂಗ್ ಹೋಮಿಗೆ ಟ್ಯಾಕ್ಸ್ ಏತಕ್ಕೆ ಹಾಕಿದ್ದೀರಿ ? ಪುಕ್ಕಟೆಯಾಗಿ ಪರಿಜನಗಿರಿಜನರಿಗೆ, ಹಿಂದುಳಿದ ವರಿಗೆ, ಸ್ಲಂ ಪ್ರದೇಶದಲ್ಲಿರುವವರಿಗೆ, ಬಡವರಿಗೆ ಔಷಧಿ ಕೊಡುವ ಕೆಲಸ ಮಾಡಿದ್ದೀರಾ ? ಬರೀ ಎಂ. ಎಲ್. ಎ. ಗಳಿಗೆ ಮಾತ್ರ ಔಷಧಿ ಕೊಟ್ಟರೆ ಮುಗಿಯಿತೆ ? ಮಾನ್ಯ ಸಭಾಪತಿಗಳೇ, ನಾಲ್ಕು ಕೋಟಿ ಜನರಲ್ಲಿ ಅವರ ಹೇಳಿಕೆ ಪ್ರಕಾರವೇ ಎರಡೂವರೆ ಕೋಟಿಗಿಂತ ಹೆಚ್ಚು ಜನ ಬಡತನದ ರೇಖೆಗಿಂತ ಕಡಿಮೆ ಇದ್ದಾರೆ. ನನ್ನ ಪಗಾರಕ್ಕೂ ಕೂಡ ಸ್ಟೇ ಆರ್ಡರ್ ಬಂದಿದೆ. ನೋಡುವುದಕ್ಕೆ ನಾನು ದೊಡ್ಡವನಂತೆ ಕಾಣುತ್ತೇನೆ. ಒಳಗೆ ಏನಿಲ್ಲ. ''ಅಂದರೆ ಕಿ ಬಾತ್ ರಾವ್ ಜಾನ್'' ಅಂದಹಾಗಾಗಿದೆ. ಇಂಥ ಪರಿಸ್ಥಿತಿಯಲ್ಲಿ ಕರ್ನಾಟಕದ ಜನ ಇರುವಾಗ ಔಷಧೋಪಚಾರ ಕೊಡುವಂಥ ಕೆಲಸ ಮಾಡಬೇಕು. ತಾವು ನಾಟಕ ಮಾಡುವವರಿಗೆ, ಡ್ಯಾನ್ಸ್ ಮಾಡುವವರಿಗೆ, ಗಾಯನ ಮಾಡುವವರಿಗೆ ಹಣ ಕೊಡುತ್ತೀರಿ. ಅವರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಕಲೆಗೆ ಪ್ರೋತ್ಸಾಹ ಕೊಡಿ. ಆದರೆ ಯಾವುದು ಪ್ರಾಮುಖ್ಯವೋ ಅದಕ್ಕೆ ಆದ್ಯತೆ ಕೊಡಬೇಕು. ಕುಡಿಯುವವರಿಗೆ ೧೫೦ ಪರ್ಸೆಂಟಲ್ಲ, ೨೦೦ ಪರ್ಸೆಂಟ್ ತೆರಿಗೆ ಬೇಕಾದರೆ ಹಾಕಿರಿ. ಅನಾವಶ್ಯಕವಾದ ಪದಾರ್ಥಗಳ ಮೇಲೆ ಹೆಚ್ಚು ತೆರಿಗೆ ಹಾಕಿ. ಆದರೆ ಜೀವನಕ್ಕೆ ಅತ್ಯಂತ ಅವಶ್ಯವಾದ ವಸ್ತುವಿಗೆ ನೀವು ತೆರಿಗೆ ಹಾಕಿದ್ದೀರಿ. ಕಣ್ಣಿನ ತಜ್ಞ ಬದರೀನಾಥ್ ಎಂಬುವವರು ಇಲ್ಲಿ ಅವಕಾಶ ಆಗಲಿಲ್ಲ ಎಂದು ಮದ್ರಾಸಿನಲ್ಲಿ ಆಸ್ಪತ್ರೆ ಮಾಡಿದ್ದಾರೆ. ಕರ್ನಾಟಕದಲ್ಲಿ ಅವಕಾಶ ಕೊಟ್ಟಿದ್ದರೆ ಅವರು ಮದ್ರಾಸಿನಲ್ಲಿ ಆಸ್ಪತ್ರೆ ಮಾಡುತ್ತಿದ್ದರು. ಅಂಥ ಒಳ್ಳೆ ಕೆಲಸಕ್ಕೆ ತಾವು ಉತ್ತೇಜನ ನೀಡುವುದಿಲ್ಲ. ರೆಡ್ಡಿಯವರು ಅಪೊಲೊ ಆಸ್ಪತ್ರೆ ಮಾಡಿದ್ದಾರೆ. ಕರ್ನಾಟಕದಲ್ಲಿ ಆಗ ಅವರಿಗೆ ಅವಕಾಶ ಮಾಡಿಕೊಡಲಿಲ್ಲ. ಆದ್ದರಿಂದ ಅವರು ಬೇರೆ ರಾಜ್ಯದಲ್ಲಿ ಅದನ್ನು ಮಾಡಿದರು. ಕರ್ನಾಟಕದವರಿಗೆ ಹೈದರಾಬಾದ್ ಮತ್ತು ಮದ್ರಾಸಿನವರು ಅವಕಾಶ ಮಾಡಿಕೊಡುತ್ತಾರೆ. ಆದರೆ ನಮ್ಮವರು ಮಾಡಿಕೊಡುವುದಿಲ್ಲ. ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡು ನರ್ಸಿಂಗ್ ಹೋಂಗಳನ್ನು ಮಾಡಿಕೊಂಡಿದ್ದರೆ ಅವರ ಮೇಲೆ ತೆರಿಗೆ ಹಾಕಿ ಶೋಂದರೆ ಕೊಡುತ್ತಿದ್ದೀರಿ. ೨೦ ಅಂಶದ ಕಾರ್ಯಕ್ರಮದ ಪ್ರಕಾರ ಬ್ಯಾಂಕಿನವರು ಸಾಲ ಕೊಟ್ಟರೆ ಅದಕ್ಕೆ ನಮ್ಮ ಘನ ಸರ್ಕಾರದವರು ಟ್ಯಾಕ್ಸ್ ಹಾಕಿದ್ದಾರೆ. ಮಾನ್ಯ ಸಭಾಧಿಪತಿಯವರೆ, ತಾವು ಅನೇಕ ಸಂಸ್ಥೆಗಳನ್ನು ಕಟ್ಟಿದವರು,

ಬೆಳೆಸಿದವರು. ಸೊಸೈಟಿ ಸೆಕ್ರೆಟರಿಗೆ ೧೫ ಮೂರು ರೂಪಾಯಿಗಳ ಪಗಾರ ಕೊಡುತ್ತಾರೆ. ಅವರಿಗೆ ಇವರಹಾಗೆ ೩೦೦ ರೂಪಾಯಿ ಪಗಾರ ೧೨೦೦ ಭತ್ಯ ಎಂದು ಕೊಡುವ ಪದ್ಧತಿ ಇಲ್ಲ. ಒಟ್ಟಿಗೆ ಕೊಡುತ್ತಾರೆ. ಅಂಥವರು ತೆರಿಗೆ ಕೊಡಬೇಕು ಆದರೆ ಇಲ್ಲಿ ಐ. ಎ. ಎಸ್. ಅಧಿಕಾರಿಗಳಿಗೆ ಸಂಬಳ ಇಷ್ಟು ಭತ್ಯ ಇಷ್ಟು ಎಂದು ಬೇರೆ ಬೇರೆ ಕೊಡುವುದರಿಂದ ಇವರು ಈ ತೆರಿಗೆ ಕೊಡುವ ಕಾನೂನಿನಿಂದ ತಪ್ಪಿಸಿಕೊಳ್ಳುತ್ತಾರೆ ಕೇವು ಕಂಪೆನಿ ಮ್ಯಾನೇಜಿಂಗ್ ಡೈರೆಕ್ಟರ್‌ಗಳಿಗೆ ೮೦೦ ರೂಪಾಯಿ ಪಗಾರ ಇದ್ದರೆ ಭತ್ಯ ಮೂರು ನಾಲ್ಕು ಸಾವಿರ ರೂಪಾಯಿ ಇರುತ್ತದೆ. ಅಂಥವರೂ ಈ ಕಾನೂನಿನ ಪರಿಮಿತಿಯಿಂದ ತಪ್ಪಿಸಿಕೊಳ್ಳುತ್ತಾರೆ. ಆದ್ದರಿಂದ ಈ ರೀತಿ ಜನರಿಗೆ ತೊಂದರೆಯಾಗತಕ್ಕ ತೆರಿಗೆಯನ್ನು ತೆಗೆಯಿರಿ ಎಂದು ಹೇಳುತ್ತೇನೆ. ಫಿಲ್ಮ್ ಡಿಸ್ಟ್ರಿಬ್ಯೂಷನ್‌ಗೆ ೨೫೦ ರೂಪಾಯಿ ಟ್ಯಾಕ್ಸ್ ಹಾಕಿದ್ದಾರೆ. ಇಲ್ಲಿ ಪ್ರೊಡ್ಯೂಸ್ ಮಾಡುವಂಥ ಕನ್ನಡ ಚಿತ್ರಗಳಿಗೆ ಒಂದೂವರೆ ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತೇವೆ ಎಂದು ಹೇಳುತ್ತೀರಿ. ಫುಲ್ ಡೆವೆಲಪ್‌ಮೆಂಟ್ ಆಗಬೇಕು ಎಂದು ಹೇಳಿ ಒಂದು ಕಡೆ ಸಬ್ಸಿಡಿ ಕೊಟ್ಟು ಇನ್ನೊಂದು ಕಡೆಯಲ್ಲಿ ಟ್ಯಾಕ್ಸ್ ಏತಕ್ಕೆ ಹಾಕುತ್ತೀರಿ ? ಟ್ಯಾಕ್ಸ್ ಬಿಡಬೇಕಾಗಿತ್ತು, ಅಥವಾ ಸಬ್ಸಿಡಿ ಹೆಚ್ಚಿ ಸಬಾರದಾಗಿತ್ತು. ಈ ರೀತಿ ಒಂದು ಕಡೆ ಕೊಟ್ಟು ಇನ್ನೊಂದು ಕಡೆ ತೆಗೆದುಕೊಂಡು ಜನರನ್ನು ತಪ್ಪು ದಾರಿಗೆ ಎಳೆಯುವಂಥ ಪ್ರಯತ್ನ ಏತಕ್ಕೆ ಮಾಡುತ್ತೀರಿ ಎಂದು ಕೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ನಾನು ಇನ್ನೂ ಹೆಚ್ಚು ಹೊತ್ತು ಮಾತನಾಡಬೇಕೆಂದಿದ್ದರೂ ತಮ್ಮ ಕೈ ಬಿಲ್ ಮೇಲೆ ಹೇಗಂತ್ತದೆ ಎಂಬ ಅರಿವು ನನಗಿದೆ. ಆದ್ದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏನೇ ಮಾತನಾಡಿದರೂ ಕೂಡ ಅವರಿಗೆ ಬಹುಮತ ಇರುವುದರಿಂದ ಕೇಳುವುದಿಲ್ಲ. ಆದರೆ ನಾವು ಹೇಳುವುದನ್ನು ಕೇಳುವ ಸೌಜನ್ಯವೂ ಇಲ್ಲವೆಂದರೆ...

ಶ್ರೀ ಎ. ಲಕ್ಷ್ಮೀಸಾಗರ್.- ನಮಗೆ ಕೇಳುವಷ್ಟು ಸೌಜನ್ಯ ಇಲ್ಲ ಎಂದು ಹೇಳತಕ್ಕದು ಅಸೌಜನ್ಯವಾದ ಮಾತು. ನಾವು ಕೇಳುತ್ತಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.— ಫೈನಾನ್ಷಿಯಲ್ ಮೆಮೊರ್ಯಾಂಡಂ ಅವಶ್ಯವಿದ್ದರೂ ಅದರ ಬಗ್ಗೆ ನಾವು ರೈಸ್ ಮಾಡಲಿಲ್ಲ. ಸರ್ಕಾರದವರು ಟೆಕ್ನಿಕಾಲಟಿಯಲ್ಲಿ ತಪ್ಪು ಮಾಡಿದ್ದರೂ ನಾವು ಸುಮ್ಮನಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್ —ಇದಕ್ಕೆ ಫೈನಾನ್ಷಿಯಲ್ ಮೆಮೊರ್ಯಾಂಡಂ ಅವಶ್ಯಕತೆ ಇಲ್ಲ. ಪಕ್ಕದಲ್ಲೇ ಮೊಯಿಲಿಯವರು ಇದ್ದಾರೆ. ಅವರನ್ನು ಕೇಳಿ,

ಶ್ರೀ ಕೆ. ಎಚ್. ಪಾಟೀಲ್, --ನನ್ನ ಅಭಿಪ್ರಾಯದಲ್ಲಿ ಕೊಡಬೇಕಾಗಿತ್ತು.

ಅದನ್ನು ನಾನು ಇಲ್ಲಿ ರೈಸ್ ಮಾಡಿದರೆ ತಾವೂ ಕೂಡಾ ಅಪ್ಪಣೆ ಕೊಡುವುದಕ್ಕೆ ಬರುವುದಿಲ್ಲ. ಅದರೂ ನಾವು ಮಾಡುವುವಕ್ಕೆ ಹೋಗುವುದಿಲ್ಲ. ಬರೀ ನೀವು ೧೦ ಸಾವಿರ ರೂಪಾಯಿ ಬರುತ್ತದೆ ಎಂದು ಹೇಳಿದರೆ ಆಗುವುದಿಲ್ಲ ನೀವು ಎಲ್ಲದರ ಬಗ್ಗೆ ಡೀಟೇಲ್ ಕೊಡಬೇಕಾಗುತ್ತದೆ. ನಾವು ಯಾವ ರೀತಿ ಸಹಕಾರವನ್ನು ಕೊಡುತ್ತೇವೆ ಅದನ್ನು ತೆಗೆದುಕೊಳ್ಳುವ ಔದಾರ್ಯ ಇಲ್ಲ. ಆದ್ದರಿಂದ ಈ ಬಗ್ಗೆ ಏನಾದರೂ ಆಗುತ್ತದೆಯೆಂದು ಎಂದೂ ನಾವು ನೋಡುವುದಿಲ್ಲ. ಏಕೆಂದರೆ ಇವರು ಪಾನವೀಯ ದೃಷ್ಟಿಯಿಂದ ಇದನ್ನು ನೋಡುವುದಿಲ್ಲ. ಕರ್ನಾಟಕದ ೪ ಕೋಟಿ ಜನರಿಗೆ ಏನು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅದನ್ನು ಈ ಬಿಲ್ ತರುವ ಮೂಲಕಾಂತರ ಮಾಡಿದ್ದೀರಿ ಎಂದು ಹೇಳುತ್ತೇನೆ. ಇದರಿಂದಾಗಿ ಇವತ್ತು ಬಡವರ ಕತ್ತಿಗೆ ಗದಾಪ್ರಹಾರ ಆಗಿದೆ. ಇವತ್ತು ದುಡ್ಡು ಇರುವವರಿಗೆ ಇಲ್ಲದವರಿಗೆ ಒಂದೇ ಕಾನೂನು. ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದು ಆಗುತ್ತಾ ಇದೆ. ಇವತ್ತು ಬೇಸಿಕ್ ಸ್ಯಾಲರಿಯನ್ನು ಏಕ್ಕಕ್ಕೆ ತೆಗೆದುಕೊಳ್ಳುತ್ತೀರಿ ? ಇವತ್ತು ನನಗೆ ಸ್ಯಾಲರಿ ಬೇಡ, ೧೫,೦೦೦ ಸಾವಿರ ಅಲೋಯನ್ಸ್ ಕೊಡಿ. ಅದರಿಂದ ಟ್ಯಾಕ್ಸ್ ತಪ್ಪಿಸಿಕೊಳ್ಳಬಹುದು ಅಲ್ಲವೇ ? ಇವತ್ತು ಎಂ.ಎಲ್.ಎ.ಗಳಿಗೆ ಜಾಸ್ತಿ ಪಗಾರ ಕೊಡಿ ಎಂದು ಹೇಳುವುದಿಲ್ಲ. ಇವತ್ತು ಎಂ.ಎಲ್.ಎ.ಗಳಿಗೆ ಮೋಟಾರ್ ಕೊಳ್ಳಲು ಸಾಲ ಕೊಡಲು ಹೊರಟಿರುವಾಗ ಜನ ಇದನ್ನು ನೋಡಿ ಏನೆಂದುಕೊಂಡಾರು ? ಇಷ್ಟು ವಿಷಯಗಳ ಬಗ್ಗೆ ನಾನು ತಮ್ಮ ಗಮನ ಸೆಳೆದು ಇಷ್ಟು ಮಾತನಾಡು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ವೀರಪ್ಪ ಮೊಯ್ಲಿ (ಕಾರ್ಕಳ) —ಸನ್ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಕೆ. ಎಚ್. ಪಾಟೀಲರು ಬಹಳ ಚೆನ್ನಾಗಿ ಮಾತನಾಡಿದರು. ಪಂತ್ತು ಸರ್ಕಾರದ ಅಪ್ರಮಾಣಿಕತೆಗೆ

ಕನ್ನಡಿಯನ್ನು ಹಿಡಿದಿದ್ದಾರೆ. ಇವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ವೃತ್ತಿ ತೆರಿಗೆಯನ್ನು ತೆಗೆಯುತ್ತೇವೆ ಎಂದು ಹೇಳಿ ಇವತ್ತು ಬೇರೆ ಬೇರೆ ರೂಪದಲ್ಲಿ ವೃತ್ತಿ ತೆರಿಗೆಯನ್ನು ಹಾಕುತ್ತಿರುವ ಪ್ರಯತ್ನ ಬಹಳ ಸ್ಪಷ್ಟವಾಗಿದೆ. ಕೊಟ್ಟಿಂತಹ ಆಶ್ವಾಸನೆಯನ್ನು ನಡೆಸುವುದಕ್ಕೆ ಸಂಪನ್ಮೂಲಗಳ ತೊಂದರೆ ಇದ್ದರೆ ಅದನ್ನು ಈ ಸದನದ ಮುಂದೆ ಹೇಳಿದ್ದರೆ ನಾವು ಅದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೆವು. ೧೯೮೫-೮೬ರಲ್ಲಿ ೧೨.೫೬ ಕೋಟಿ ರೂಪಾಯಿ ಪ್ರೊಫೆಷನಲ್ ಟ್ಯಾಕ್ಸ್ ಬರಂತಾ ಇತ್ತು. ನಂತರ ಬೇರೆ ಬೇರೆ ರಿಯಾಯಿತಿಯನ್ನು ಕೊಟ್ಟರು. ಆದ್ದರಿಂದ ಅದು ಈಗ ೫-೪೦ ಕೋಟಿ ರೂಪಾಯಿಗೆ ಬಂತು. ಆ ನಂತರ ಇವರು ಪರಿಶೀಲನೆ ಮಾಡಿದರು ಸುಮಾರು ೧೨ ಅಥವಾ ೧೫ ಕೋಟಿ ರೂ.ಗಳು ಹಿಂದೆ ಏನು ಬರುತ್ತಾ ಇತ್ತು ಆದಾದರೂ ಬರುವ ಹಾಗೆ ಏನು ಮಾಡಬೇಕೋ ಅದನ್ನು ಮಾಡೋಣವೆಂದು ಇವರು ಹೊರಟಿದ್ದಾರೆ ಅದು ಜನರಿಗೆ ಗೊತ್ತಾಗಬೇಕು. ಇವರು ಮಾತಿಗೂ ಕೃತಿಗೂ ಕೃತಿಗೂ ಎಷ್ಟು ದೂರ ಎಂದರೆ...

ಶ್ರೀ ಎ. ಲಕ್ಷ್ಮೀಸಾಗರ್,—ಅದನ್ನು ಹೇಳಿದ್ದೀರಲ್ಲಾ ? ಎಷ್ಟು ಸಾರಿ ಹೇಳಂವುದು ?

SRI M. VEERAPPA MOILY.—Kindly hear me. You should be receptive. He is the most negative person. I do not think the Hon. Parliamentary Affairs Minister should act in a manner in which it is not befitting to his office He is adopting an offensive type of attitude.

SRI A. LAKSHMI SAGAR.—I only said, you are repeating.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಮತ್ತೊಂದು ವಿಚಾರ. ಬಡ್ಜೆಟ್ಟಿನಲ್ಲಿ ಇವರು ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಅವುಗಳು ಟ್ಯಾಕ್ಸ್ ಇರಬಹುದು. ಪ್ರೊಫೆಷನಲ್ ಟ್ಯಾಕ್ಸ್ ಕೂಡಾ ಟ್ಯಾಕ್ಷೇಷನ್ ಮೆಷರ್. ಇವತ್ತಿನ ದಿವಸ ಆಯವ್ಯಯ ಭಾಷಣ ಎಂದರೆ ಅದಕ್ಕೆ ಒಂದು ಪಾವಿತ್ರ್ಯತೆ ಇದೆ, ೧,೨೬೦ ರೂ.ಗಳ ಬೇಸಿಕ್ ಸ್ಯಾಲರಿ ಕೆಳಗೆ ಇರುವವರಿಗೆ ಆದಾಯ ತೆರಿಗೆ ರಿಯಾಯಿತಿ ಎಂದು ಬಡ್ಜೆಟ್‌ನಲ್ಲಿ ಘೋಷಣೆ ಆಯಿತು. ಇದು ಪತ್ರಿಕೆಗಳಲ್ಲೂ ಬಂತು. ಜನ ಏನು ತಿಳಿದುಕೊಂಡರು ಎಂದರೆ, ಇದು ಏನೋ ಹೊಸ ರಿಯಾಯಿತಿ ಇರಬಹುದು ಎಂದು. ಆದರೆ ಈ ರೀತಿಯಾಯಿತಿ ಬಗ್ಗೆ, ೯-೧-೧೯೮೫ ರಂದೇ ಸರ್ಕಾರದಿಂದ ಎಲ್ಲರಿಗೂ ಸೂಚನೆ ಹೋಗಿದೆ. ಟ್ರೆಶರಿಗೂ ಡೈರೆಕ್ಷನ್ ಹೋಗಿದೆ. ಮತ್ತು ಪ್ರೊಫೆಷನಲ್ ಟ್ಯಾಕ್ಸ್ ಕಲೆಕ್ಟ್ ಮಾಡತಕ್ಕ ಎಲ್ಲಾ ಅಧಿಕಾರಿಗಳಿಗೂ ಮೇ ೧೯೮೫ರಲ್ಲೇ ಆದೇಶ ಹೋಗಿದೆ. ಹೀಗಾದರೆ ಇದರ ಸ್ಯಾಂಕ್ಟಿಟಿ ಎಲ್ಲಿ ಉಳಿಯಿತು ? It is a fit matter where we could have brought Privilege Issue against the Minister or the Finance Minister. I am telling about the sanctity of this measure. But we are bringing it by means of a law. It is a very important matter even though it looks very much technical. ಈ ವಿಚಾರದಲ್ಲಿ ಇದು ಬಹಳ ಪ್ರಾಮುಖ್ಯವಾದ ವಿಚಾರ. ಇನ್ನು ಕೆಲವು ಹೊಸ ಕ್ಯಾಟಗರಿ ಆಫ್ ಪೀಪಲ್ಸ್‌ಗೆ ಪ್ರೊಫೆಷನಲ್ ಟ್ಯಾಕ್ಸ್ ತಂದಿದ್ದೀರಿ. ಇದರಲ್ಲಿ ಸನ್ಮಾನ್ಯ ಸದಸ್ಯರಾದ ಕೃಷ್ಣ ಅವರು ಹೇಳಿದರು, ಕ್ಲಾಸ್ ೨೦(ಡಿ)ನಲ್ಲಿ ಡ್ರೈಕ್ಲೀನರ್ಸ್ ಎಂದು ಹೇಳಿದ್ದೀರಿ. ಇವರಿಗೆ ನೀವು ರಿಯಾಯಿತಿಯನ್ನು ಕೊಡಬೇಕು. ಇವತ್ತಿನ ದಿವಸ ಹಳ್ಳಿಗಳಲ್ಲಿಯೂ ಡ್ರೈಕ್ಲೀನರ್ಸ್ ಇದ್ದಾರೆ. ಒಂದು ಪೆಟ್ಟಿಗೆ ಇಟ್ಟುಕೊಂಡು ಆತ ಇದ್ದರೂ ಟ್ಯಾಕ್ಸ್ ಕೊಡಬೇಕೆಂದಾಯಿತು. ಇನ್ನು ಬ್ಯೂಟಿ ಪಾರ್ಲರ್ಸ್ ಬಗ್ಗೆ ಹೇಳಿದ್ದೀರಿ. ಇದರ ಕೆಳಗೆ ಬಾರ್‌ಬರ್ ಶಾಪ್ ಹಾಗೂ ಹೇರ್‌ಕಟಿಂಗ್ ಶಾಪ್‌ಗಳು ಏನು ಇವೆ ಇವುಗಳೂ ಕೂಡಾ

(ಶ್ರೀಮತಿ ಲೀಲಾವತಿ ಪ್ರಸಾದ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇದಕ್ಕೆ ಆನ್ವಯವಾಗುತ್ತವೆಯೆಂದು ಕಾಣುತ್ತದೆ. ಬ್ಯೂಟಿ ಪಾರ್ಲರ್ಸ್ ಎಂದರೆ ಬೆಂಗಳೂರಿನಲ್ಲಿ ಇರುವ ಬ್ಯೂಟಿ ಪಾರ್ಲರ್‌ಗೆ ಮಾತ್ರ ಇದು ಸೀಮಿತವೇ ಅಥವಾ ಬಾರ್‌ಬರ್ ಶಾಪ್‌ಗಳು ಏನು ಇವೆ ಅವಕ್ಕೂ ಇದು ಅಪ್ಲೈ ಆಗುತ್ತದೆಯೇ ಎಂದು ತಿಳಿಸಬೇಕು. ಇವರು ಬಾರ್‌ಬರ್ ಶಾಪ್‌ಗಳಿಗೆ ಇದು

ಅನ್ವಯವಾಗುವುದಿಲ್ಲವೆಂಬ ಮಾತನ್ನು ಕೊಡಬೇಕಾಗುತ್ತದೆ. ಇವತ್ತು ಬ್ಯೂಟಿ ಪಾರ್ಲರ್‌ಗಳ ಮೇಲೆ ಬಂದದ್ದನ್ನು ಈ ಬಾರ್‌ಬರ್ ಶಾಪ್‌ಗಳ ಮೇಲೆ ಹಾಕಂವುದಕ್ಕೂ ಯಾವುದೇ ತಡೆ ಇಲ್ಲ. ಆದ್ದರಿಂದ ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ನಾವು ಹೇಳಿದರೂ ಕೂಡಾ ಇವರು ಪ್ರೊಫೆಷನಲ್ ಟ್ಯಾಕ್ಸ್ ಬಿಟ್ಟುಕೊಡುವುದಿಲ್ಲ. ನಾವು ಹೇಳಿದಷ್ಟು ಅವರು ಹೆಚ್ಚು ಮಾಡುತ್ತಾರೆ ಎಂಬುದು ಅವರ ಈ ಮಸೂದೆಯಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗೂ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಗಳನ್ನು ಸಮರ್ಪಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ (ಗುರುಮಠಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರೇ ಏನು ವೃತ್ತಿ ತೆರಿಗೆ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದಾರೆ ಇದನ್ನು ವಿರೋಧಿಸಿ ನಾನು ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಇದಕ್ಕೆ ಕಾರಣ ಇಷ್ಟೇ. ಈಗಾಗಲೇ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು, ಮಾನ್ಯ ಕೆ. ಎಚ್. ಪಾಟೀಲ್ ಅವರು ಹಾಗೂ ಮಾನ್ಯ ವೀರಪ್ಪ ಮೊಯ್ಲಿಯವರು ಕೂಡಾ ಈ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ. ಬಹುಶಃ ನಾನೂ ಅದನ್ನೇ ಹೇಳಿದರೆ ಮಾನ್ಯ ಲಕ್ಷ್ಮೀಸಾಗರ್ ಅವರು ಮತ್ತೆ ರಿಪೀಟ್ ಮಾಡುವುದು ಬೇಡ ಎಂದು ಹೇಳ ಬಹುದು. ಹಿಂದೇ ಒಂದು ಇದರಲ್ಲಿ ಹೇಳಬೇಕು ಎಂದರೆ, ಇದನ್ನು ರಿಪೀಟ್ ಮಾಡತಕ್ಕ ಅವಶ್ಯಕತೆಯೇ ಏನೂ ಇಲ್ಲ. ಕಾರಣ ಇಷ್ಟೇ. ತಾವು ಹಿಂದೆ ೧೯೪೩ರಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ. ನಾವು ವೃತ್ತಿ ತೆರಿಗೆಯನ್ನು ತೆಗೆದುಹಾಕುತ್ತೇವೆಂದು ಘೋಷಣೆ ಕೊಟ್ಟುದರ ಫಲವಾಗಿ ತಾವು ಚುನಾವಣೆಯಲ್ಲಿ ಗೆದ್ದು ಬಂದಿರಿ. ಎಂದರೆ, ನೀವು ಕೊಟ್ಟ ಮಾತನ್ನು ಇಷ್ಟತ್ತಿನ ದಿವಸ ಉಳಿಸಿಕೊಂಡಿಲ್ಲ ಎಂದು ನಮಗೆ ವ್ಯಥೆ ಏಕೆಂದರೆ ಒಂದು ಕಡೆ ತಿ ರೀತಿ ಹೇಳಿ ಅಧಿಕಾರಕ್ಕೆ ಬಂದಿರಿ. ಅಧಿಕಾರಕ್ಕೆ ಬಂದಮೇಲೆ ನೀವು ಆ ಕೆಲಸ ವನ್ನು ಮಾಡಿಲ್ಲ. ನೀವು ಮಾಡದೇ ಇರುವುದು ಇದು ಒಂದೇ ಅಲ್ಲ. ನಿನ್ನೆ ಕೂಡಾ ಮಾನ್ಯ ಹಾಲಪ್ಪ ನವರು ಸಹಕಾರಿ ಬಿಲ್ ತಂದಾಗ ಈ ಭಾಗದ ಅನೇಕ ಸದಸ್ಯರು, ಚುನಾವಣೆಯಲ್ಲಿ ಯಾವ ರೈತರು ನಿಮಗೆ ಸಹಾಯ ಮಾಡಿದರೋ ಅವರಿಗೆ ನೀವು ಈ ಮೂಲಕ ಗಧಾಪ್ರಹಾರ ಮಾಡಿದ್ದೀರಿ. ಜರ್ನ ಲಿಸ್ಟ್, ಎಂಪ್ಲಾಯಿಸ್, ಬಡವರು ಹೆಚ್ಚು ಕಡಿಮೆ ನಿಮ್ಮನ್ನು ಅಧಿಕಾರಕ್ಕೆ ಮತ್ತೆ ತರುವುದಕ್ಕೆ ಸಹಾಯ ಮಾಡಿದಂತಹವರಿಗೇ ಈ ರೀತಿಯಾದ ಕಾನೂನನ್ನು ತಂದು ಅವಹೇಳನ ಮಾಡುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಇಲ್ಲಿ ಒಂದು ವಿಶೇಷವನ್ನು ತಾವು ಗಮನಿಸಬೇಕು.

' Salary or wage earners whose salary or wage or both as the case may be for a month is :

(a) Not less than Rs. 1,200 but less than Rs. 1,500	Rs. 15/- per month
(b) Rs. 1,500 or more	Rs. 20/- per month

೪—೩೦ ಪಿ. ಎಂ.

ಹೀಗೆ ಗರಿಷ್ಠ ೨೫೦ ರೂಪಾಯಿಗಳನ್ನು ಹಾಕಿದ್ದಾರೆ. ಇದರಲ್ಲಿ ತಾವು ಒಂದು ಅಂಶವನ್ನು ಗಮನ ದಲ್ಲಿಟ್ಟುಕೊಳ್ಳಬೇಕು. ಅದು ಎಂದರೆ ಇಂಡಸ್ಟ್ರಿಯಲ್ ಎಸ್ಟಾಬ್ಲಿಷಮೆಂಟ್‌ನಲ್ಲಿ ಅದು ಪಬ್ಲಿಕ್ ಸೆಕ್ಟಾರ್ ಇರಬಹುದು, ಅಲ್ಲಿ ಏನು ಮಾಡುತ್ತಾರೆ, ನಿಮಗೆ ಕೊಡತಕ್ಕ ವರಮಾನ ತೆರಿಗೆಯನ್ನು ತಪ್ಪಿಸಿ ಕೊಳ್ಳುವ ಸಲುವಾಗಿ ಮೂಲವೇತನವನ್ನು ೧೦೦೦ ಅಥವಾ ೧೫೦೦ ರೂ. ಎಂದು ಕಡಿಮೆ ತೋರಿಸಿ ಆವರಿಗೆ ಬೇರೆ ರೀತಿಯಲ್ಲಿ ಅಂದರೆ ಕಾರನ ಅರುಕೂಲ ಮಾಡಿಕೊಡುವುದು, ಪುಕ್ಕಡೆಯಾಗಿ ವಸತಿ ಸೌಕರ್ಯವನ್ನು ಒದಗಿಸಿಕೊಡುವುದು, ಟ್ರಾನ್ಸ್‌ಪೋರ್ಟೇಷನ್ ಭಾರ್ಜಸ್ ಎಂದು ಕೊಡುವುದು ಇತ್ಯಾದಿ ರೀತಿಯಲ್ಲಿ ಸುಮಾರು ೪-೫ ಸಾವಿರ ರೂಪಾಯಿಗಳವರೆಗೂ ಸಂಭಾವನೆಯನ್ನು ಕೊಡುತ್ತಾರೆ. ಏಕೆಂದರೆ ಅವರಿಗೆ ಹೆಚ್ಚಿಗೆ ಪಗಾರವನ್ನು ಕೊಟ್ಟರೆ ಅವರು ಸರ್ಕಾರಕ್ಕೆ ವರಮಾನ ತೆರಿಗೆಯನ್ನೂ ಕೊಡ ಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳಬೇಕೆಂಬುದು ಅವರ ಮುಖ್ಯ ಉದ್ದೇಶವಾಗಿರುತ್ತದೆ. ಇಂಥವರನ್ನು ನಿಮ್ಮ ಈ ಕಾನೂನು ಅಡಿಯಲ್ಲಿ ಯಾವ ರೀತಿ ಸಿಕ್ಕಿಸಿಕೊಳ್ಳುತ್ತೀರಿ ? ನಿಮ್ಮ ಸರ್ಕಾರೀ ನೌಕರರಂತೂ ವರಮಾನ ತೆರಿಗೆಯಿಂದ ಆಗಲಿ, ಅಥವಾ ವೃತ್ತಿ ತೆರಿಗೆಯಿಂದ ಆಗಲಿ ತಪ್ಪಿಸಿಕೊಳ್ಳುವ ದಕ್ಕೆ ಸಾಧ್ಯವೇ ಇಲ್ಲ. ಇದು ಒಂದು ಕಡೆ ಆದರೆ, ಇನ್ನೊಂದು ಕಡೆ ಸರ್ಕಾರದವರು ತಮ್ಮ ನೌಕರರಿಗೆ

ತಂಟ್ಟಿ ಭತ್ಯವನ್ನು ಕೊಡುತ್ತೇವೆಂದು ಬಹಳ ಉದಾರವಾಗಿ ಘೋಷಣೆ ಮಾಡಿದಿರಿ. ಈ ರೀತಿ ಕೊಡುತ್ತೇವೆಂದು ಹೇಳಿ ಆ ಕಡೆಯಿಂದ ವೃತ್ತಿ ತೆರಿಗೆ ಕೊಡಬೇಕೆಂದು ಕಿಗ್ಗುಕೊಳ್ಳುತ್ತಿದ್ದೀರಿ. ಹೆಸರಿಗೆ ನೂರು ರೂಪಾಯಿ ಕೊಟ್ಟಿದ್ದೇವೆಂದು ತೋರಿಸಿ ಅವರಿಗೆ ಗೊತ್ತಾಗದಂತೆ ಇನ್ನೂರು ರೂಪಾಯಿಗಳನ್ನು ಕಿತ್ತು ಕೊಳ್ಳುತ್ತಿದ್ದೀರಿ. ಇವತ್ತು ಸರ್ಕಾರದಲ್ಲಿ ಕೆಲಸಮಾಡತಕ್ಕ ಜವಾನನಿಗೂ ಸ್ವಲ್ಪ ಸರ್ವೀಸ್ ಅದರೆ ಒಂದು ಸಾವಿರ ರೂಪಾಯಿ ಬರುತ್ತದೆ, ಅದೇ ರೀತಿ ಎರಡನೇ ದರ್ಜೆ ನೌಕರನಿಗೂ ಸುಮಾರು ಒಂದೂವರೆ ಸಾವಿರ ರೂಪಾಯಿ ಸಂಬಳ ಬರುತ್ತದೆ, ಅಪರಿಗೆ ಒಂದು ಕಡೆ ತಂಟ್ಟಿ ಭತ್ಯ ಕೊಟ್ಟು ಇನ್ನೊಂದು ಕಡೆಯಲ್ಲಿ ವೃತ್ತಿ ತೆರಿಗೆಯನ್ನು ಹಾಕುತ್ತಿದ್ದೀರಿ. ಮೊದಲು ಇದು ಇರಲಿಲ್ಲ. ಅಂದ ಮೇಲೆ ಮತ್ತೆ ಏತಕ್ಕೆ ಇದನ್ನು ತಂದಿರಿ ? ಮೊದಲು ನಿಮ್ಮ ಈ ಕಾನೂನನ್ನು ವಾಪಸು ತೆಗೆದುಕೊಳ್ಳಿ. ನೀವು ವಾಪಸು ತೆಗೆದುಕೊಂಡರೆ ನೌಕರರು ನಿಮಗೆ ಆಶೀರ್ವಾದ ಮಾಡುತ್ತಾರೆ. ಆದೂ ಆಲ್ಲದೆ ಇವರು ನಿಮಗೆ ಚುನಾವಣೆ ಸಂದರ್ಭದಲ್ಲಿ ಸಹಾಯ ಮಾಡಿರತಕ್ಕ ಜನ. ಇದನ್ನಾದರೂ ಗಮನದಲ್ಲಿಟ್ಟುಕೊಂಡು ವಾಪಸು ತೆಗೆದುಕೊಳ್ಳಿ.

ಇನ್ನು ಜರ್ನಲಿಸ್ಟ್ಸ್ ಬಗ್ಗೆ ಹೇಳುವುದಾದರೆ, ಇವರು ಎಲ್ಲೋ ಬಹಳ ಪ್ರಸಿದ್ಧವಾದ ಫರ್ಮ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರೂ ಕೂಡ ನಿಮಗೆ ತೆರಿಗೆಯನ್ನು ಕೊಡಬೇಕಾಗಿದೆ ಕೆಪರು ತಾಲ್ಲೂಕು ಪ್ರದೇಶದಲ್ಲಿರುತ್ತಾರೆ. ಮತ್ತೆ ಕೆಲವರು ನಗರ ಪ್ರದೇಶದಲ್ಲಿರುತ್ತಾರೆ. ಮಾನ್ಯ ಕೆ. ಹೆಚ್. ಪಾಟೀಲ್ ರವರು ಹೇಳಿದಂತೆ ಇಂಥಿಂಥವರು ಜರ್ನಲಿಸ್ಟ್ಸ್ ಎಂದು ಹುಡುಕುವುದಕ್ಕಾಗುವುದಿಲ್ಲ. ಒಂದು ವೇಳೆ ಕಷ್ಟಪಟ್ಟು ನೀವು ಹುಡುಕಿದರೂ ಕೂಡ ಅವರಿಂದ ಬರತಕ್ಕ ತೆರಿಗೆ ಕೇವಲ ೧೦ ಲಕ್ಷಕ್ಕಿಂತ ಹೆಚ್ಚಿಗೆ ಬರುವುದಿಲ್ಲ ಅಂದ ಮೇಲೆ ಅವರ ಮೇಲೆ ಏತಕ್ಕೆ ನೀವು ಈ ತೆರಿಗೆಯನ್ನು ಹಾಕಿ ಕೆಟ್ಟ ಹೆಸರನ್ನು ತೆಗೆದುಕೊಳ್ಳುತ್ತೀರಿ ? ಇಂಥ ಕೆಟ್ಟ ಹೆಸರನ್ನು ತೆಗೆದುಕೊಳ್ಳಬಾರದೆಂದು ನಿಮಗೆ ಸೂಚಿಸಬಯಸುತ್ತೇನೆ. ಮತ್ತು ಈಗ ಏನು ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸಿದ್ದೀರಿ ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ ವಿರೋಧ ಮಾಡುವುದಲ್ಲದೆ ನೀವು ಹಿಂದೆ ಏನು ಆಶ್ವಾಸನೆಯನ್ನು ನೀಡಿದ್ದಿರಿ ಆದರಂತೆ ನಡೆದುಕೊಳ್ಳಬೇಕೆಂದು ತಿಳಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮುಖ್ಯಮಂತ್ರಿಯವರು ಬಸವನಗುಡಿಯಲ್ಲಿ ಒಮ್ಮೆ ಭಾಷಣ ಮಾಡುತ್ತಾ ನಾವು ಅಧಿಕಾರಕ್ಕೆ ಬಂದರೆ ಈ ವೃತ್ತಿ ತೆರಿಗೆಯನ್ನು ತೆಗೆದುಹಾಕುತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು ಇತ್ತೀಚೆಗೆ ನಾನು ಈ ವೃತ್ತಿ ತೆರಿಗೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನೂ ಕೂಡ ಕೇಳಿದ್ದೆ. ಆಗಲೂ ಅದಕ್ಕೆ ಸಮಂಜಸವಾದ ಉತ್ತರ ಬರಲಿಲ್ಲ, ಮತ್ತು ಇವತ್ತೂ ಕೂಡ ಮಾನ್ಯ ಮುಖ್ಯಮಂತ್ರಿಯವರಿಂದ ಸಮಂಜಸ ಉತ್ತರ ಸಿಕ್ಕಲಿಲ್ಲ ನನ್ನ ಅಭಿಪ್ರಾಯವಾದಲ್ಲಿ ಹೇಳುವುದಾದರೆ ಮಹಾತ್ಮಾ ಗಾಂಧಿಯವರ ಸಮಾಜವಾದವನ್ನು ಹೇಳತಕ್ಕ ಜನರು ಯಾರು ಮೊದಲಿನಿಂದಲೂ ಈ ದೇಶವನ್ನು ಆಳುತ್ತಿದ್ದಾರೆ, ಅಂಥ ಈ ದೇಶದಲ್ಲಿ ಇಡೀ ಪ್ರಪಂಚದಲ್ಲೇ ಎಲ್ಲೂ ಇಲ್ಲದಷ್ಟು ಕಪ್ಪು ಹಣ ತುಂಬಿದೆ. ಒಂದು ಕಡೆ ಗಾಂಧೀವಾದವನ್ನು ಹೇಳಿಕೊಂಡು, ನಾವು ಆರ್ಥಿಕ ಸಮಾನತೆಯನ್ನು ತರುತ್ತೇವೆಂದು ಹೇಳಿಕೊಂಡು ರಾಜ್ಯಭಾರ ಮಾಡುತ್ತಿದ್ದರೂ ಕೂಡ ಈ ಕಪ್ಪು ಹಣ ಹೊರಗೆ ಬರುತ್ತಲೇ ಇದೆ.

ಶ್ರೀ ರಮೇಶ್‌ಕುಮಾರ್.—ನಿಮ್ಮ ಪಕ್ಷದವರು ಇಂಥವರ ಜೊತೆಯಲ್ಲಿ ಸಹಕರಿಸುತ್ತಿದ್ದಾರೆ.

SRI U. BHUPATHI —That is exactly where you are mistaken. Electoral adjustment is different from alliance. We have no alliance with the Janata Party. We have only the electoral adjustment.

SRI M. S. KRISHNAN.—I am only sorry for the ignorance of Mr. Ramesh Kumar, We thought he was an intelligent peason. ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಖಿರ್ಗೆಯವರು ಪದೇ ಪದೇ ಹೇಳುತ್ತಿದ್ದರು. ಆಗಲೂ ನಾನು ಸುಮ್ಮನಿದ್ದೆ. ಈಗ ಆ ಕಡೆಯವರೂ ಹೇಳುತ್ತಿದ್ದಾರೆ. ಆದರೆ ಇದು ನಿಜ ಒಂದು ಪಕ್ಷ ಅಂದ ಮೇಲೆ ಚುನಾವಣೆ ಬಂದಾಗ ಚುನಾವಣೆಯ ಸಂಬಂಧ ಬೆಳೆಸುತ್ತಾರೆ. ಈಗ ಅವರಿಗೆ ೬೦-೭೦ ಸೀಟು ಹೆಚ್ಚಿಗೆ ಸಿಕ್ಕಿದ್ದರಿಂದ ಅವರು ಅಧಿಕಾರದಲ್ಲಿದ್ದಾರೆ. ಹಿಂದೆ ನಾವೂ ಕೂಡ ಅವರ ಜೊತೆ ಕೆಲಸ ಮಾಡಿದ್ದೇವೆ. ಅಷ್ಟೇ ಹೊರತು, ಅವರಾಗಲಿ, ಅಥವಾ ಇವರಾಗಲಿ ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಯು. ಭೂಪತಿ.—ವೇತನವನ್ನು ತೆಗೆದುಕೊಳ್ಳತಕ್ಕ ನೌಕರರಿಗೆ ವೇಜ್ ರಿವಿಸನ್ ಮಾಡುವಾಗ ಬೇಸಿಕ್ ಪೇ ಏನು ಜಾಸ್ತಿಯಾಗುತ್ತದೆ ಅದು ಕಾಸ್ಟ್ ಆಫ್ ಲಿವಿಂಗ್‌ನ್ನು ನೋಡಿಕೊಂಡು ಅದಕ್ಕನುಸಾರವಾಗಿ ತುಟ್ಟಿ ಭತ್ಯವನ್ನು ಕೊಡುತ್ತಾರೆಯೇ ಹೊರತು ಅವಶ್ಯಕತೆಗೆ ಮೀರಿ ಸಂಬಳವನ್ನು ಕೊಡುವುದಿಲ್ಲ. ತಿಂಗಳಿಗೆ ೧೨೦೦ ರೂಪಾಯಿಗೆ ಹೆಚ್ಚಿಗೆ ಸಂಬಳವನ್ನು ಪಡೆಯತಕ್ಕ ವ್ಯಕ್ತಿಗಳಿಗೆ ಅವರ ಜೀವನಕ್ಕೆ ಅವಶ್ಯಕವಾಗಿ ಎಷ್ಟು ಬೇಕಾಗುತ್ತದೆ ಅದಕ್ಕನುಗುಣವಾಗಿ ಸರ್ಕಾರದವರು ನಿಗದಿ ಮಾಡಿತ್ತಾರೆ. ಆದರೆ ಇದರಲ್ಲಿ ಹೆಚ್ಚಿಗೆ ಆದಾಯ ಬರುತ್ತದೆ ಎಂಬ ದೃಷ್ಟಿಯಿಂದ ಮಾಡಬಾವುದಿಲ್ಲ. ಆದ್ದರಿಂದ ಇದಕ್ಕೆ ವೃತ್ತಿ ತೆರಿಗೆ ಹಾಕುವುದು ಸರಿಯಲ್ಲ. ಇದನ್ನು ತಾವು ಮಾಪಸು ತೆಗೆದುಕೊಳ್ಳಬೇಕು.

ಇನ್ನು ಬಹಳ ಪ್ರಮುಖವಾಗಿ ನರ್ಸಿಂಗ್ ಹೋಂ ಮತ್ತು ಎಕ್ಸ್‌ರೇ ಕ್ಲಿನಿಕ್‌ಗಳ ಬಗ್ಗೆ ತಿಳಿವು ಹೇಳಿದ್ದೀರಿ. ಮಾನ್ಯ ಸದಸ್ಯರಾದ ಕೆ. ಪೆಚ್. ಪಾಟೀಲರು ಹೇಳಿದ್ದರ ಬಗ್ಗೆ ಸ್ವಲ್ಪ ಭಿನ್ನಾಭಿಪ್ರಾಯ ಬರಬಹುದು ಇವತ್ತು ಹೆಚ್ಚಿನ ರೀತಿಯಲ್ಲಿ ನರ್ಸಿಂಗ್ ಹೋಂಗಳನ್ನು ನಡೆಸುತ್ತಿರುವವರು ಎಂದರೆ ಸರ್ಕಾರೀ ಆಸ್ಪತ್ರೆಗಳಲ್ಲಿ ಪ್ರೊಫೆಸರ್‌ಗಳಾಗಿ ಕೆಲಸ ಮಾಡುತ್ತಿರುವವರು. ಇವರ ನರ್ಸಿಂಗ್ ಹೋಂಗೆ ಯಾರೇ ಒಬ್ಬ ರೋಗಿ ಆಥವಾ ಕೈಕಾಲು ಮುರಿದುಕೊಂಡ ವ್ಯಕ್ತಿ ಒಳಗೆಹೋಗಿ ಹೊರಗೆ ಬಂದರೆ ಕೇವಲ ೨–೩ ದಿವಸದಲ್ಲಿ ಕನಿಷ್ಠ ಎಂದರೂ ಒಂದು ಸಾವಿರ ರೂಪಾಯಿಗಿಂತ ಕಡಿಮೆ ಖರ್ಚುಮಾಡದೆ ಹೊರಗೆ ಬರುವುದಕ್ಕಾಗುವುದಿಲ್ಲ. ಇವರಿಂದ ನೀವು ಯಾವ ರೀತಿ ವೃತ್ತಿ ತೆರಿಗೆಯನ್ನು ವಸೂಲು ಮಾಡುತ್ತೀರಿ ? ಮತ್ತು ಎಷ್ಟು ವಸೂಲು ಮಾಡುತ್ತೀರಿ ? ಇವರು ಪರಮಾನ ತೆರಿಗೆಯ ಲೆಕ್ಕಗಳನ್ನು ತೋರಿಸುತ್ತಾರೆ. ನಾನಾದರೂ ತಮಗೆ ಹೇಳುತ್ತೇನೆ ನಮ್ಮ ದೇಶದಲ್ಲಿರತಕ್ಕ ಪ್ರತಿಯೊಬ್ಬ ವರಮಾನ ತೆರಿಗೆ ದಾರನೂ ಪ್ರಾಮಾಣಿಕವಾಗಿ ತೆರಿಗೆಯನ್ನು ಕೊಟ್ಟರೆ ಕಪ್ಪು ಹಣದ ಖಿದ್ಮರ ಸಂಖ್ಯೆ ಆಷ್ಟೊಂದು ಇರುವುದಿಲ್ಲ. ನರ್ಸಿಂಗ್ ಹೋಂಗಳನ್ನು ನಡೆಸುತ್ತಿರುವವರು ಇವತ್ತು ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಮಾಡಿದ್ದಾರೆ. ಇವರಿಂದ ವರ್ಷಕ್ಕೆ ನೀವು ಎಷ್ಟು ತೆರಿಗೆಯನ್ನು ತೆಗೆದುಕೊಳ್ಳುತ್ತೀರಿ ಎಂಬುದು ನಮಗೆ ಅರ್ಥವಾಗುತ್ತಿಲ್ಲ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆಯವರೆ, ಇವತ್ತು ಎಕ್ಸ್‌ರೇ ಕ್ಲಿನಿಕ್‌ಗಳಿಗೆ ಆದಾಯವನ್ನು ಮಾಡಿಕೊಡುತ್ತಿರುವವರು ಎಂದರೆ ನಮ್ಮ ಸರ್ಕಾರೀ ಆಸ್ಪತ್ರೆಗಳವರು. ಇದು ತಮಗೂ ಗೊತ್ತಿರಬಹುದು. ನಿಮ್ಮ ಕಡೆಯವರೂ ಯಾರಾದರೂ ಕೈಕಾಲು ಮುರಿದುಕೊಂಡು ಎಕ್ಸ್‌ರೇ ಡಿಪಾರ್ಟ್‌ಮೆಂಟ್‌ಗೆ ಹೋಗಿ ಎಕ್ಸ್‌ರೇ ತೆಗೆಯಬೇಕೆಂದು ಕೇಳಿದರೆ, ಎಕ್ಸ್‌ರೇ ಫಿಲಂ ಇಲ್ಲ ಎಂದೂ ಹೇಳುತ್ತಾರೆ. ಆದರೆ ಸರ್ಕಾರದಿಂದ ಸರಬರಾಜು ಆದಂಥ ಎಕ್ಸ್‌ರೇ ಫಿಲಂ ಪೂರ್ತಿಯಾಗಿ ಖಾಸಗೀ ನರ್ಸಿಂಗ್ ಹೋಂಗೆ ಹೋಗುತ್ತದೆ. ನಾವು ಹೊರಗಡೆಯಿಂದ ಫಿಲಂನ್ನು ತಂದುಕೊಟ್ಟರೆ ಅದನ್ನು ಎಕ್ಸ್‌ರೇ ಫೋಟೋ ತೆಗೆಯುವುದಕ್ಕೂ ಹಣವನ್ನು ಕಿತ್ತುಕೊಂಡು ಕಳುಹಿಸುತ್ತಾರೆ. ಇಂಥ ನರ್ಸಿಂಗ್ ಹೋಂಗಳವರಿಂದ ನೀವು ಯಾವರೀತಿ ವೃತ್ತಿ ತೆರಿಗೆಯನ್ನು ವಸೂಲು ಮಾಡುತ್ತೀರೆಂದು ಹೇಳಬೇಕು. ಒಟ್ಟಿನಲ್ಲಿ ಸರ್ಕಾರೀ ನೌಕರರ ಮೇಲೆ ಏನು ವೃತ್ತಿ ತೆರಿಗೆಯನ್ನು ಹಾಕುತ್ತಿದ್ದೀರಿ ಇದು ಖಂಡಿತವಾಗಿಯೂ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾದುದು ಎಂದು ಹೇಳಿ ಈಗ ಈ ಮಸೂದೆಯನ್ನು ಸಭೆಯ ಮುಂದೆ ಏನು ಮಂಡಿಸಿದ್ದೀರಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಿಳಿಸಿ ಆಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

† SRI BLASIUS M. D'SOUZA (Mangalore).—Mr. Speaker, Sir, at the outset, I oppose this Bill. This Bill has been brought to exempt professional tax to those employees whose basic salary is Rs. 1,200 and below. We find as earlier Speakers have said in the Central Government concerns like LIC, Banks the employees basic salary might be less than Rs. 1,000 but they get higher emoluments adding other allowances like DA, CCA HRA etc., but the State Government employees get more than Rs. 1,200 basic salary and their allowances

are much less compared to the Central Government employees. If a State Government employee gets Rs. 2,000 in all the Central Government employee or an employee working in Banks and LIC gets more an Rs. 3,500 and he escapes from the purview of professional tax just because his basic salary is less than Rs. 1,200. I would like to point out to the Hon'ble Minister that this goes against the Article 14 of our Constitution equality before law, but here we are making two unequals as equal and bringing them under the proview of the Act and a man gets higher salary or the amount as the case may be escapes from this Act. On this ground, if any one goes to the court the provisions of the Act will be struct down.

Secondly, in the table you have made two categories one is notless than Rs. 1,500 and Rs. 1,500 or more. I would therefore urge the Hon'ble Minister to increase this to atleast Rs. 3,000 so that the real benefit is given to all the employees.

Then, you have said Dealers registered under the Karnataka Sales Tax Act, 1957 whose turn over is not less than Rs. 75,000 have to pay Rs. 2 0 per annum. As you know the Corporation and Municipalities already charging them various taxes and this will be an additional burden to them. Therefore, I would request the Hon'ble Minister to reconsider and exempt them from paying this professional tax. With these words I would request the Hon'ble Minister for Law who knows very well about the legal matter to withdraw this bill as some of the provisions are against the Constitutional Law.

ಶ್ರಿ ಎ. ಲಕ್ಷ್ಮೀಸಾಗರ್.— (ನಗರಾಭಿವೃದ್ಧಿ ಸಚಿವರು)

ಸನ್ಮಾನ್ಯ ಅಧ್ಯಕ್ಷರೇ ಈ ವೃತ್ತಿ ತೆರಿಗೆಯ [illegible] ಹೊಸ ವಿಷಯವಲ್ಲ. ವೃತ್ತಿ ತೆರಿಗೆ ಈ ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದ ಸಮಯದಿಂದಲೂ ಸ್ವಲ್ಪ ಹೆಚ್ಚು ಕಡಿಮೆ ಇದೇ ಧಾಟಿಯಲ್ಲಿ ಟೀಕೆ ಟಿಪ್ಪಣಿಗಳು ಬಂದಿವೆ.

SRI M. S. KRISHNAN.—The Chief Justice of India on this question said at that time that this is a most unscientific Act which Karnataka has brougat.

SRI A. LAKSHMISAGAR.—Judges also can err, Ministers and politicians also can err... ಈಗಲೂ ಅದೇ ಧಾಟಿಯಲ್ಲಿ ವಾದಗಳನ್ನು ಸಭೆಯಮುಂದೆ ಮಂಡಿಸಿದ್ದಾರೆ. ಅವರು ಮಂಡಿಸಿರತಕ್ಕಂಥ ವಾದ ಸೈದ್ಧಾಂತಿಕವಾದುದಾಗಿಲ್ಲ, ಅವೈಜ್ಞಾನಿಕವಾದುದಾಗಿರುತ್ತದೆ. ಸೈದ್ಧಾಂತಿಕ ಚೌಕಟ್ಟಿನಲ್ಲಿ ಅದರ ಲಾಭಾ ಲಾಭಗಳನ್ನು ವಿಚಾರ ಮಾಡಬೇಕೆಂದು ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಹೇಳಿದ್ದಾರೆ. ಅವೈಜ್ಞಾನಿಕ ಹೇಗೆ ಎಂದು ಕೂಡ ಚಿಂತನೆ ಮಾಡಬೇಕೆಂದು ಹೇಳಿದ್ದಾರೆ. ಸೈದ್ಧಾಂತಿಕವಾಗಿ ಅಂದರೆ ಯಾವ ಸಿದ್ಧಾಂತಕ್ಕೆ ಇದು ವಿರುದ್ಧವಾಗಿದೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಅವರು ಯಾವ ಸಿದ್ಧಾಂತದ ಮೇಲೆ ತಮ್ಮ ರಾಜಕೀಯವನ್ನು

ಬೆಳೆಸಿಕೊಂಡು ಬಂದಿದ್ದಾರೋ ಅದೇ ಧಾಟಿಯಲ್ಲಿ ನಡೆದು ಅದೇ ಸಿದ್ಧಾಂತವನ್ನು ಬೆಳೆಸಿಕೊಂಡು ಬರಲು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಸಿದ್ಧಾಂತದ ಬಗ್ಗೆ ಮಾತನಾಡುವಾಗ ಸಾಧಾರಣವಾಗಿ ಅರ್ಥವಾಗದಂತೆ ಮಾತನಾಡಿದರೆ ಪ್ರಯೋಜನವಿಲ್ಲ. ಉಳ್ಳವರು ಕೊಡಬೇಕು. ಈ ಮಾತನ್ನು ಒಪ್ಪಿಕೊಂಡಿರುತ್ತೇವೆ. ಅದಕ್ಕೆ ಕಾನೂನು ಇದೆ, ಸಂವಿಧಾನದಲ್ಲಿ ಅವಕಾಶವೂ ಇದೆ. ಆರ್ಟಿಕಲ್ ೨೭೯ರ ಪ್ರಕಾರ ಮ್ಯಾಕ್ಸಿಮಮ್ ೨೫೦ ರೂಪಾಯಿಗಳವರೆಗೆ ಮಾತ್ರ ವೃತ್ತಿ ತೆರಿಗೆಯನ್ನು ವಿಧಿಸಿದ್ದೇವೆ. ಇಷ್ಟೊಂದು ಟ್ಯಾಕ್ಸ್ ಹಾಕಿದ್ದರೂ ಬಡವರಮೇಲೆ ಟ್ಯಾಕ್ಸನ್ನು ಹಾಕಿಲ್ಲವೆಂದು ಮಾನ್ಯ ಕೆ. ಎಚ್. ಪಾಟೀಲರಿಗೆ ಹೇಳಬಯಸುತ್ತೇನೆ. ಅವರು ಭಾಷಣ ಮಾಡತಕ್ಕಂಥ ಕಾಲದಲ್ಲಿ ಬಹಳ ಉದ್ದನೆಯ ಭಾಷಣವನ್ನು ಬೆಳೆಸಿ ಕಠಿಣವಾದ ಪದಗಳನ್ನು ಉಪಯೋಗಿಸಿದರು ಸಹ ರಂಜಿಸಿದರು. ಕಠಿಣವಾದ ಪದಗಳನ್ನು ಬಳಸಿಲ್ಲವೆಂದು ಮನಸ್ಸಿನಲ್ಲಿ ತಿಳಿದುಕೊಂಡಿದ್ದರು ಸಹ ಏನು ಹೊಸ ವಿಚಾರವನ್ನು ಹೇಳಲಿಲ್ಲ, ಚರ್ವಿತ ಚರ್ವಣ ಅದೇ, ಭಾಷೆ, ಅದೇ ದಿಕ್ಕಿನಲ್ಲಿ ಮಾತನಾಡಿದರೇ ಹೊರತು ಹೊಸ ವಿಚಾರವನ್ನು ಏನು ಪ್ರಸ್ತಾಪ ಮಾಡಲಿಲ್ಲ. ಆನಂತರ ಇನ್ನಿತರ ಮಾನ್ಯ ಸ್ನೇಹಿತರಾದಂಥ ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು, ಪಾಟೀಲ್‌ರವರು, ಮಾನ್ಯ ವೀರಪ್ಪಮೊಯಲಿಯವರು ಮಾತನಾಡುತ್ತಾ ವಚನ ಭ್ರಷ್ಟರಾಗಿದ್ದಾರೆಂದು ನಮ್ಮ ವಿಚಾರದಲ್ಲಿ ಶೋಕದ ಕಣ್ಣೀರನ್ನು ಪ್ರಾಖಾನುಪೂರ್ವಿಯಾಗಿ ಸುರಿಸಿದ್ದಾರೆ. ಅವರ ಶೋಕ ಬೇರೆ ಕಡೆ ವರ್ಗಮಾಡಲಿ, ನಮ್ಮ ಬಗ್ಗೆ ಶೋಕದ ಕಣ್ಣೀರನ್ನು ಸುರಿಸುವುದು ಬೇಡವೆಂದು ಬಹಳ ವಿನಯದಿಂದ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮತ್ತೆ ವಿಲ್ಲುವನ್ನು ಪಕ್ಕಸಾಟಿ ಕೊಡಿ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.— ಗುಡು ಹೆಣ್ಣು ಮಲಗೋ ಮಂಚವೊಂದನ್ನು ಬಿಟ್ಟು ಬಾಕಿ ಎಲ್ಲವನ್ನು ಪಕ್ಕಸಾಟಿ ಕೊಡುತ್ತೇವೆಂದು ಹೇಳಿರುವಾಗ ಅದನ್ನು ಏಕೆ ಬಿಟ್ಟಿದ್ದೀರಿ, ಅದನ್ನು ಪಕ್ಕಸಾಟಿ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.— ಮತ್ತೆ ನೀವು ಅಧಿಕಾರಕ್ಕೆ ಬಂದಮೇಲೆ ಏನು ಮಾಡುತ್ತೀರಿ ಎಂಬುದನ್ನು ನೋಡೋಣ. ಮೂವತ್ತೈದು ವರ್ಷಗಳಿಂದ ಏನು ಮಾಡಿದ್ದೀರಿ ಎಂಬುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಿಮಗೆ ಯಾವಾಗಲೂ ಮಂಚದಮೇಲೆಯೇ ಯೋಚನೆ. ಮಾನ್ಯ ಕೆ. ಹೆಚ್. ಪಾಟೀಲರಿಗೆ ಬಟ್ಟೆ, ಊಟ, ರೊಟ್ಟಿ ಪುಸ್ತಕ ಇವುಗಳ ಮೇಲೆ ಅವರಿಗೆ ಇಷ್ಟವಿಲ್ಲ. ಅವರಿಗೆ ಬರೇ ಮಂಚದಮೇಲೆ ಯೋಚನೆಯಾದರೆ ನಾನು ಏನು ಮಾಡಲಿ, ಆದ್ದರಿಂದ ಹೊಸ ವಿಚಾರವೇನಾದರೂ ಇದ್ದರೆ ಹೇಳಲಿ. ಮತ್ತೆ ಮಾನ್ಯ ವೀರಪ್ಪಮೊಯ್ಲಿಯವರು ಬ್ಲೂಟಿ ಪಾರ್ಲರ್ ಎಂದರೆ ಏನು ಎಂದು ಸ್ಪಷ್ಟೀಕರಿಸಬೇಕೆಂದು ಹೇಳಿದರು. ಬ್ಲೂಟಿ ಪಾರ್ಲರ್ ಎಂದರೆ ಇದು ಶೃಂಗಾರಧಾಮಗಳಿಗೆ ಮಾತ್ರ ಅನ್ವಯಿಸುತ್ತದೆ.

ಶ್ರೀ ಕೆ. ಎಚ್. ಪಾಟೀಲ್.— ಬ್ಯೂಟಿ ಪಾರ್ಲರ್‌ಗೆ ಹೆಂಗಸರು ಮಾತ್ರ ಹೋಗುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಇಲ್ಲ ಗಂಡಸರೂ ಹೋಗುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ನಾಳೆ ಬ್ಯೂಟಿ ಪಾರ್ಲರ್‌ಗೆ ಟ್ಯಾಕ್ಸ್ ಹಾಕಿದರೆ ಅವರು ಇನ್ನು ಮುಂದೆ ''ಲೇಡಿಸ್ ಹೇರ್ ಡ್ರೆಸ್ಸಿಂಗ್ ಸಲೂನ್'' ಎಂದು ಬೋರ್ಡು ಹಾಕಿಕೊಳ್ಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಆದ್ದರಿಂದ ಇದು ಸರ್ವಸಮ್ಮತವಾಗಿದೆ. ಉಳ್ಳವರು ಇಲ್ಲದೇ ಇರುವವರಿಗೆ ಕೊಡತಕ್ಕಂಥ ಪ್ರಯತ್ನ ಮಾಡಬೇಕಾಗಿದೆ. ಇದು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೆಂದು ನಾನು ಭಾವನೆ ಮಾಡುತ್ತೇನೆ. ನಮ್ಮ ದೇಶದಲ್ಲಿ ಬಡತನದಲ್ಲಿರತಕ್ಕಂಥವರು, ನಿರ್ಗತಿಕರು ಏನು ಇದ್ದಾರೆ, ಅವರಿಗೆ ಸ್ವಲ್ಪಮಟ್ಟಿಗಾದರೂ ಸಹಾಯಕವಾಗತಕ್ಕಂಥ ರೀತಿಯಲ್ಲಿ ಈ ಕರವನ್ನು ನಾವು ಹಾಕಿದ್ದೇವೆ. ಸಮಾಜದ ಎಲ್ಲಾ ಜನರೂ ಇದಕ್ಕೆ ಮಾನ್ಯತೆಕೊಟ್ಟು ತೆರಿಗೆ ಕೊಟ್ಟು ಸರ್ಕಾರಕ್ಕೆ ಸ್ವಲ್ಪಮಟ್ಟಿಗಾದರೂ ಹಣ ಬರಲಿಕ್ಕೆ ಸಹಾಯ ಮಾಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಈ ವಿಧೇಯಕಕ್ಕೆ ಪೂರ್ಣ ಬೆಂಬಲ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದನ್ನು ಅಬಾಲಿಶ್ ಮಾಡಿದರೆ ಅವರಿಗೇ ಒಳ್ಳೆಯದಾಗುತ್ತದೆ, ಇನ್ನೊಮ್ಮೆ ಯೋಚನೆ ಮಾಡಿನೋಡಿ.

ಅಧ್ಯಕ್ಷರು.— ಪ್ರಸ್ತಾಪ ಏನೆಂದರೆ ''೧೯೮೫ರ ಕರ್ನಾಟಕ ವೃತ್ತಿ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೫ರವರೆಗೆ

ಅಧ್ಯಕ್ಷರು.— '' ಖಂಡ ೨ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಖಂಡ ೨ರಿಂದ ೫ರವರೆಗೂ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು).— ''೧೯೮೫ರ ಕರ್ನಾಟಕ ವೃತ್ತಿ, ವ್ಯಾಪಾರ, ಉದ್ಯೋಗ ಮೇಲಿನ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.— ಪ್ರಸ್ತಾಪ ಏನೆಂದರೆ. ''೧೯೮೫ರ ಕರ್ನಾಟಕ ವೃತ್ತಿ ವ್ಯಾಪಾರ, ಉದ್ಯೋಗ ಮೇಲಿನ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿ ವಿಧೇಯಕ'' ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೫ನೇ ಇಸವಿ ಕರ್ನಾಟಕ ಮನರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕದ ಪರ್ಯಾಲೋಚನಾ ಪ್ರಸ್ತಾಪ.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಮತ್ತು ಸಂಸದಿಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೫ನೇ ಸಾಲಿನ ಕರ್ನಾಟಕ ಮನರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಇದು ಮತ್ತೊಂದು ಜನತಾಪಕ್ಷದ ಬಡವರ ಕೊಡುಗೆ. ಇದರ ಬಗ್ಗೆ ಮಾತನಾಡುವುದಕ್ಕೆ ಏನೂ ಇಲ್ಲ. ಏಕೆಂದರೆ ಇವರಿಗೆ ಕೇಳುವುದಕ್ಕೆ ಕಿವಿಯಿಲ್ಲ. ವಿಚಾರ ಮಾಡಲಿಕ್ಕೆ ತಲೆಯಿಲ್ಲ. ಚುಂಚಿ ಮಾತನಾಡುವುದನ್ನು ಮಾತ್ರ ಮಾಡುತ್ತಾರೆ. ಹಳ್ಳಿಗಾಡುಗಳಲ್ಲಿ